PRGI NO : KNKAN/26/A0884

E NAMMA DHURTHI NEWS KANNADA DAILY NEWS PAPER

ಈ ನಮ್ಮ

# ಧೃತಿ ನ್ಯೂಸ್

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 220 ಪುಟಗಳು: 04 ಬೆಲೆ: 02 ದಿನಾಂಕ: 18-10-2026 ಭಾನುವಾರ | email: enammadhruthinews@gmail.com | Pho : 7353595904

## ಮಳೆ, ಚರಂಡಿಯಲ್ಲಿ ನೀರು ಹರಿಯದೆ ತೊಂದರೆ

ಧೃತಿ ನ್ಯೂಸ್ ಸುದ್ದಿ

ಕುಕನೂರು: ತಾಲೂಕಿನ ದ್ಯಾಂಪೂರು ಗ್ರಾಮದಲ್ಲಿ ಮಳೆಯಾದ ಹಿನ್ನಲೆ ಚರಂಡಿಯಲ್ಲಿ ಮಳೆ ನೀರು ಹರಿದು ಹೋಗದೆ ನಿಂತಲ್ಲೆ ನಿಂತು ನಿವಾಸಿಗಳು ತೊಂದರೆ ಅನುಭವಿಸುವಂತ್ತಾಗಿತು.



ಚರಂಡಿಗಳು ತ್ಯಾಜ್ಯದಿಂದ ಕೂಡಿದ್ದು, ಮಳೆ ನೀರು ತುಂಬಿಕೊಂಡು ಹರಿದು ಹೋಗಲು ಆಗಲಿಲ್ಲ. ಅಲ್ಲದೆ ಚರಂಡಿಗಳು ಮುಖ್ಯ ಚರಂಡಿಗಿಂತ ತಗ್ಗು ಪ್ರದೇಶದಲ್ಲಿವೆ. ನೀರು ಹರಿದು ಹೋಗಿ ಮುಖ್ಯ ಚರಂಡಿಂಯನ್ನು ಸೇರುವುದಿಲ್ಲ. ಹೀಗಾಗಿ ಮಳೆ ಆದರೆ ಮಳೆ ನೀರು ಚರಂಡಿ ತುಂಬಿ ಮನೆಗಳ ಮುಂದೆ ಬಿಡುತ್ತದೆ. ಮಳೆ ನೀರಿನ ಜತೆಗೆ ಚರಂಡಿಯಲ್ಲಿನ ತ್ಯಾಜ್ಯ ಸಹ ನೀರಿನೊಂದಿಗೆ ಹರಿಯುತ್ತದೆ. ಇದರ ಬಗ್ಗೆ ಹಲವಾರು ಬಾರಿ ಗ್ರಾಪಂಗೆ ಮನವಿ ಸಲ್ಲಿಸಿದರೂ ಇದುವರೆಗೂ ಯಾವುದೇ ಕ್ರಮ ಆಗಿಲ್ಲ ಎಂದು ಸ್ಥಳೀಯ ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

**ಇನ್ನೊಂದು ಕಡೆ ಸಣ್ಣದಾದ ಚರಂಡಿ:**

ಸ್ಥಳೀಯ ಕಾಲನಿಯ ನೀರು ಹರಿದು ಹೋಗಲು ನಿರ್ಮಿಸಲಾದ ಚರಂಡಿ ಕಿರಿದಾದ ಕಾರಣ ಚರಂಡಿ ನೀರು ರಸ್ತೆ ಮೇಲೆ ಹತ್ತಿ ಹರಿಯುತ್ತದೆ. ದೊಡ್ಡದಾದ ಚರಂಡಿ ನಿರ್ಮಿಸಿದರೆ ನೀರು ಸರಾಗವಾಗಿ ಹರಿದು ಹೋಗಲು ಅನುಕೂಲ ಆಗುತ್ತದೆ ಎಂದು ಸ್ಥಳೀಯರ ಆಗ್ರಹ.

## ಮನುಷ್ಯನ ಸಂಸ್ಕಾರವೇ ಬದುಕಿಗೆ ದಾರಿದೀಪ : ಡಾ. ಮಹಾದೇವ ಸ್ವಾಮೀಜಿ



ಧೃತಿ ನ್ಯೂಸ್ ಸುದ್ದಿ

ಕುಕನೂರು: ಮನುಷ್ಯನು ಜೀವನದಲ್ಲಿ ಉತ್ತಮ ಚಿಂತನೆ, ಸನ್ನಡತೆ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಬದುಕಿಗೆ ನಿಜವಾದ ಅರ್ಥ ಬರುತ್ತದೆ ಎಂದು ಕುಕನೂರಿನ ಪೂಜ್ಯ ಶ್ರೀ ಮ.ನಿ.ಪ್ರ. ಡಾ. ಮಹಾದೇವ ಮಹಾಸ್ವಾಮಿಗಳು ಹೇಳಿದರು.

ಅವರು ಕುಕನೂರು ತಾಲ್ಲೂಕಿನ ಬಿನ್ನಾಳ ಗ್ರಾಮದ ಹಿರಿಯಮ್ಮ ದೇವಿ ದೇವಸ್ಥಾನದಲ್ಲಿ ನಡೆಯುತ್ತಿರುವ ದೇವಿ ಪುರಾಣ ಕಾರ್ಯಕ್ರಮದ ಅಂಗವಾಗಿ ಆಶೀರ್ವಚನ ನೀಡಿ ಮಾತನಾಡಿದರು. ಮನುಷ್ಯನ ಆಲೋಚನೆಗಳು ಆತನ ನಡೆ–ನುಡಿಗಳನ್ನು ರೂಪಿಸುತ್ತವೆ. ನಡೆ–ನುಡಿಗಳು ವ್ಯಕ್ತಿತ್ವವನ್ನು ಬೆಳೆಸುತ್ತವೆ. ಆದ್ದರಿಂದ ಪ್ರತಿಯೊಬ್ಬರೂ ಸಕಾರಾತ್ಮಕ ಚಿಂತನೆಗಳೊಂದಿಗೆ ಬದುಕಿ, ಕುಟುಂಬ ಹಾಗೂ ಸಮಾಜಕ್ಕೆ ಒಳಿತಾಗುವ ಕಾರ್ಯಗಳನ್ನು ಮಾಡಬೇಕು. ಉತ್ತಮ ಸಂಸ್ಕಾರ, ಸನ್ನಡತೆ ಮತ್ತು ಮಾನವೀಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ದೇವಿ ಪುರಾಣಗಳು ಮನುಷ್ಯನಿಗೆ ಭಕ್ತಿ, ಧರ್ಮ, ನೀತಿ ಮತ್ತು ಸಂಸ್ಕಾರಗಳ ಮಹತ್ವವನ್ನು ತಿಳಿಸಿಕೊಡುತ್ತವೆ. ಪುರಾಣ ಪ್ರವಚನಗಳ ಮೂಲಕ ಜೀವನದ ಸತ್ಯಗಳನ್ನು ಅರಿತುಕೊಂಡು, ಅವುಗಳನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಭಕ್ತಿಭಾವವನ್ನು ಬೆಳೆಸುವುದರ ಜೊತೆಗೆ ಜನರಲ್ಲಿ ನೈತಿಕ ಪ್ರಜ್ಞೆ, ಸೌಹಾರ್ದ ಮತ್ತು ಉತ್ತಮ ಸಂಸ್ಕಾರಗಳನ್ನು ಮೂಡಿಸುತ್ತವೆ ಎಂದು ಪೂಜ್ಯರು ಹೇಳಿದರು. ಚನ್ನಯ್ಯ ಹಿರೇಮಠ ಅವರು ಅತಿಥಿಗಳಾಗಿ ಮಾತನಾಡಿ, ದೇವಿ ಪುರಾಣವು ನಮ್ಮ ಧಾರ್ಮಿಕ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹತ್ವದ ಮಾಧ್ಯಮವಾಗಿದೆ. ಪುರಾಣಗಳಲ್ಲಿ ಅಡಕವಾಗಿರುವ ಧರ್ಮ, ನೀತಿ ಹಾಗೂ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಗ್ರಾಮೀಣ ಜನರಲ್ಲಿ ಭಕ್ತಿ ಮತ್ತು ಸಂಸ್ಕಾರಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬಸವರಾಜ ಜರಗುಂಟಿ, ಮಹಮ್ಮದ್ ಸಾಬ್ ವಾಲಿಕಾರ್, ದೇವಪ್ಪ ಉಗ್ಗನವರ, ದೇವಪ್ಪ ಮುತ್ತಾಳ, ಪುರಾಣಿಕರಾದ ಶಿವಯೋಗಿ ಹಿರೇಮಠ, ಬಸಂತಪ್ಪ ಅಬ್ಬಿಗೇರಿ, ಮಾರುತಿ ಬಿನ್ನಾಳ, ಅಲ್ಲಾಬಕ್ಷಿ ಭೀಮನೂರ, ರಾಮಚಂದ್ರಪ್ಪ ಉಪ್ಪಾರ ಸೇರಿದಂತೆ ಗ್ರಾಮದ ಅನೇಕ ಗಣ್ಯರು, ಭಕ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಅಕ್ಟೋಬರ್ 23 ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: 2026–27ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಚುನಾವಣಾ ನೀತಿ ಸಂಹಿತೆ ಇರುವುದರಿಂದ ಅಕ್ಟೋಬರ್ 23 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು.



ಈ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಎಲ್ಲ ಅಧಿಕಾರಿಗಳು ತಮ್ಮ ಸಿಬ್ಬಂದಿಯೊಂದಿಗೆ ಕಡ್ಡಾಯವಾಗಿ ಹಾಜರಾಗಬೇಕು.ಅಂದು ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ, ಗ್ರಾಮ ಪಂಚಾಯತಿಗಳಲ್ಲಿ, ಸ್ಥಳೀಯ ಸಂಸ್ಥೆಗಳು, ಶಾಲಾ ಶಿಕ್ಷಣ ಸಂಸ್ಥೆಗಳು ಹಾಗೂ ಎಲ್ಲಾ ಅನುದಾನಿತ/ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ, ಅಧೀನ ಕಾರ್ಯಾಲಯಗಳಲ್ಲಿ ಕಡ್ಡಾಯವಾಗಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪತ್ರಿಕೆಗಳ ನೋಂದಣಿ ಪ್ರಕ್ರಿಯೆ ಸಂಪೂರ್ಣ ಆನ್ ಲೈನ್

## ಕುಂದುಕೊರತೆ ತ್ವರಿತ ನಿವಾರಣೆಗೆ ಕ್ರಮ : ಯೋಗೇಶ್ ಕುಮಾರ್ ಬವೇಜಾ

ಧೃತಿ ನ್ಯೂಸ್ ಸುದ್ದಿ

ಬೆಂಗಳೂರು: ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ನೋಂದಣಿ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರವು ಹಲವಾರು ಮಹತ್ವದ ಬದಲಾವಣೆಗಳನ್ನು ತರುವ ಮೂಲಕ ಸುಮಾರು 150 ವರ್ಷದಷ್ಟು ಹಳೆಯ ಕಾಯ್ದೆಯನ್ನು ಮಾಧ್ಯಮದವರ ಅನುಕೂಲಕ್ಕಾಗಿ ಡಿಜಿಟಲೀಕರಣದೊಂದಿಗೆ ಸರಳೀಕರಣಗೊಳಿಸುವ ಮೂಲಕ ಮಾಧ್ಯಮ ಕ್ಷೇತ್ರವನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಭಾರತದ ಪತ್ರಿಕಾ ನೋಂದಣಿಯ ಪ್ರಧಾನ ಮಹಾನಿರ್ದೇಶಕರಾದ ಯೋಗೇಶ್ ಕುಮಾರ್ ಬವೇಜಾ ಅವರು ತಿಳಿಸಿದರು.

ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ವಾರ್ತಾ ಶಾಖೆ ಬೆಂಗಳೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಹಯೋಗದಲ್ಲಿ ವಾರ್ತಾಸೌಧದ ಮಹಾತ್ಮ ಗಾಂಧೀ ಮಾಧ್ಯಮ ಕೇಂದ್ರದ ಸಭಾಂಗಣದಲ್ಲಿ ಇಂದು "ಪತ್ರಿಕಾ ಮತ್ತು ನಿಯತಕಾಲಿಕೆಗಳ ನೋಂದಣಿ ಕಾಯ್ದೆ 2023" ಮತ್ತು "ಪ್ರೆಸ್ ಸೇವಾ ಪೋರ್ಟಲ್" ಗೆ ಸಂಬಂಧಿಸಿದ ಕುಂದುಕೊರತೆ, ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ದಿನಪತ್ರಿಕೆಗಳ ಮಾಲೀಕರು, ಸಂಪಾದಕರು, ಮುದ್ರಕರು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳಿಗಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಈ ಹಿಂದೆ ಹೊಸ ಪತ್ರಿಕೆ ಆರಂಭಿಸಬೇಕಾದರೆ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ಅರ್ಜಿ ಸಲ್ಲಿಸಿ ದೆಹಲಿಗೆ ಕಳುಹಿಸಬೇಕಾಗಿತ್ತು. ಇದರಿಂದ ತಿಂಗಳುಗಳು ಹಾಗೂ ವರ್ಷಗಳೇ ಕಳೆಯುತ್ತಿದ್ದವು. ಆದರೆ ಈಗ 2023 ರ ಹೊಸ ಖಾಯ್ದೆ ಮೂಲಕ ಎಲ್ಲಾ ಪ್ರಕ್ರಿಯೆಗಳನ್ನು 'ಪ್ರೆಸ್ ಸೇವಾ ಪೋರ್ಟಲ್' ಮೂಲಕ ಆನ್ ಲೈನ್ ನಲ್ಲಿ ನಡೆಯಲಿರುವುದರಿಂದ ಭೌತಿಕ ದಾಖಲೆಗಳ ಸಲ್ಲಿಕೆಗೆ ಅವಕಾಶವಿರುವುದಿಲ್ಲ. ಹಾಗಾಗಿ ನೋಂದಣಿ ಪ್ರಕ್ರಿಯೆಯು ಸುಲಭವಾಗಿ



ಮತ್ತು ಕಡಿಮೆ ಸಮಯದಲ್ಲಿ ನೆರವೇರಲಿದೆ. ಯಾವುದೇ ದಾಖಲೆಗಳು ಕಳೆದುಹೋಗುವ ಅಥವಾ ಕಾಗದಪತ್ರಗಳ ಅಲೆದಾಟದ ಸಮಸ್ಯೆ ಇರುವುದಿಲ್ಲ. ಆದ್ದರಿಂದ ಪತ್ರಿಕೆಗಳು, ನಿಯತಕಾಲಿಕೆಗಳ ನೋಂದಣಿ ಕಾಯ್ದೆಯ ಮಾರ್ಗಸೂಚಿಯನ್ನು ಎಲ್ಲರೂ ಚಾಚೂ ತಪ್ಪದೆ ಪಾಲಿಸಬೇಕು ಎಂದು ತಿಳಿಸಿದರು. ನೋಂದಣಿ ಪ್ರಕ್ರಿಯೆಯ ಕಾಲಮಿತಿಯನ್ನು ಗಣನೀಯವಾಗಿ ಕಡಿತಗೊಳಿಸಲಾಗಿದ್ದು, ಅರ್ಜಿ ಸಲ್ಲಿಸಿದ ಕೇವಲ 3 ತಿಂಗಳೊಳಗೆ ಹೊಸ ಪತ್ರಿಕೆಯನ್ನು ಪ್ರಾರಂಭಿಸಬಹುದು ಎಂದು ತಿಳಿಸಿದರು. ಪಿಆರ್ ಜಿಐನಿಂದ ಸಮಗ್ರ ಪರಿಶೀಲನೆ ಬಳಿಕ ಅಂತಿಮವಾಗಿ ಟೈಟಲ್ ನೀಡಿದ ಮೇಲೆ 12 ತಿಂಗಳೊಳಗೆ ಪತ್ರಿಕೆಯನ್ನು ಆರಂಭಿಸುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಪತ್ರಿಕೆಗಳ ಹೊಸ ರಿಜಿಸ್ಟ್ರೇಶನ್ ಮಾಡುವ ಬಗ್ಗೆ, ಮಾಲೀಕತ್ವ ಬದಲಾವಣೆ, ವಿಳಾಸ ಬದಲಾವಣೆ ಮಾಡಿಸುವುದಕ್ಕೆ ಸಹ ನಿಯಮಾನುಸಾರ ಅವಕಾಶವಿರುತ್ತದೆ. ಹೊಸ ನೋಂದಣಿ ಹೇಗೆ ಮಾಡುವುದು, ಹೊಸ ಆವೃತ್ತಿ (ಓಜತಿ ಇಜುಣುಂಟಿ) ಸೇರ್ಪಡೆ ಹೇಗೆ, ನೋಂದಣಿ ಪರಿಷ್ಕರಣೆ, ಮಾಲೀಕತ್ವ ವರ್ಗಾವಣೆ , ದಂಡ ಪಾವತಿ, ಮುದ್ರಣ ಕಾಗದ ಆಮದು ಮತ್ತು ಪತ್ರಿಕೆಗಳ ಸ್ಥಗಿತಗೊಳಿಸುವಿಕೆ/ರದ್ಧತಿ, ಇವೇ ಮುಂತಾದ ಪ್ರಕ್ರಿಯೆಗಳನ್ನು ಡಿಜಿಟಲ್ ಮೂಲಕ ಹೇಗೆ ಮಾಡುವುದು ಎಂಬುದನ್ನು ವಿವರಿಸಿದರು.

ಸಂವಾದದಲ್ಲಿ ಸಂಪಾದಕರುಗಳು ಹಾಗೂ ಜಿಲ್ಲಾ ವಾರ್ತಾಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು ಇಲ್ಲಿನ ಪ್ರತಿ ಸಲಹೆಗಳನ್ನು ಸ್ವೀಕರಿಸಲಾಗಿದೆ ಹಾಗೂ ಈ ಕುರಿತಂತೆ ಕೇಂದ್ರದ ವಾರ್ತಾ ಇಲಾಖೆಯ ಗಮನಕ್ಕೆ ತರಲಾಗುವುದು. ಕೇಂದ್ರ ವಾರ್ತಾ ಇಲಾಖೆಯ ಕರ್ನಾಟಕದ ಶಾಖೆಗಳಲ್ಲಿ ಪೇಪರ್ ಗಳ ಹಾಜರಾತಿ ಕುರಿತಂತೆ ಮುದ್ರಿತ ಪೇಪರ್ ಗಳನ್ನು ಪಡೆಯುವ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಹೇಳಿದರು. ಇದಕ್ಕೂ ಮುಂಚಿತವಾಗಿ ಮಾತನಾಡಿದ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಜೆ. ಮಂಜುನಾಥ್ ಅವರು ಮಾಧ್ಯಮವು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾಗಿದೆ. ಸಮಾಜದಲ್ಲಿ ನೂರಾರು ಉಳುಕುಗಳು ಇರುತ್ತದೆ. ಆದರೆ ಮಾಧ್ಯಮದವರು ಸಮಾಜಕ್ಕೆ ಒಳ್ಳೆಯದಾಗುವಂತಹ ಸುದ್ದಿಗಳನ್ನು ನೀಡಬೇಕು. ಪತ್ರಿಕೆಗಳು ನಕರಾತ್ಮಕ ವಿಷಯಗಳಿಗೆ ಪ್ರಾಧಾನ್ಯತೆ ಕೊಡಬಾರದು. ಬದಲಿಗೆ ಆಶಾದಾಯಕ, ಅಭಿವೃದ್ಧಿ ಪತ್ರಿಕೋದ್ಯಮಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದರು. ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಗೆ ಪತ್ರಿಕೆಗಳು ಸೇರ್ಪಡೆ ಆಗುತ್ತಿರುವ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಪತ್ರಿಕೆಗಳ ಸಂಖ್ಯೆ ಹೆಚ್ಚಳದಿಂದ ಸರಕಾರಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪತ್ರಿಕೆಗಳ ನೋಂದಣಿ, ಹಾಜರಾತಿ, ಪ್ರಸಾರ ಸಂಖ್ಯೆ ಮೇಲೆ ಇನ್ನಷ್ಟು ನಿಗಾ ವಹಿಸುವ ಅಗತ್ಯವಿರುತ್ತದೆ. ಕೃತಕ ಬುದ್ಧಿಮತ್ತೆ(ಎ.ಐ), ಚಾಟ್ ಜಿಪಿಟಿ ಮತ್ತಿತರ ತಂತ್ರಜ್ಞಾನದ ಈ ಯುಗದಲ್ಲಿ ದಿನಪತ್ರಿಕೆಗಳ ಹಾಜರಾತಿಗಾಗಿ 48 ಗಂಟೆಗಳ ಕಾಲಾವಕಾಶ ಅಗತ್ಯವಿಲ್ಲ ಎನಿಸುತ್ತದೆ. ಇದಲ್ಲದೇ ಪ್ರಸಾರ ಸಂಖ್ಯೆಯ ಬಗ್ಗೆಯೂ ನಿಗಾ ವಹಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

**"ಪತ್ರಕರ್ತರು" ಯಾರು ಎಂಬ ಸ್ಪಷ್ಟ ವ್ಯಾಖ್ಯಾನ ಅಗತ್ಯ;**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಂ. ಎನ್. ಅನುಚೇತ್ ಅವರು ಮಾತನಾಡಿ, ದಿನಪತ್ರಿಕೆಗಳ ಬೆಂಬಲಕ್ಕಾಗಿ ಸರ್ಕಾರವು ಪ್ರೋತ್ಸಾಹ ಜಾಹೀರಾತನ್ನು ನೀಡುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರೋತ್ಸಾಹ ಜಾಹೀರಾತು ಪಡೆಯುವುದಕ್ಕಾಗಿಯೇ ದಿನಪತ್ರಿಕೆಗಳು ಹುಟ್ಟಿಕೊಳ್ಳುತ್ತಿವೆ. ಪ್ರೋತ್ಸಾಹ ಜಾಹೀರಾತಿಗಾಗಿ 2022 ರಲ್ಲಿ 44 ಕೋಟಿ ರೂಪಾಯಿ ವೆಚ್ಚವಾಗಿತ್ತು. ಆದರೆ 2025–2026 ರ ವೇಳೆಗೆ ಅದರ ವೆಚ್ಚ ದ್ವಿಗುಣವಾಗಿ 82 ಕೋಟಿ ರೂಪಾಯಿಗಳಾಗಿರುತ್ತದೆ. ಆದ್ದರಿಂದ ನಿಜವಾಗಿಯೂ ಪತ್ರಿಕೋದ್ಯಮವನ್ನೇ ವೃತ್ತಿಯಾಗಿಸಿಕೊಂಡಿರುವವರಿಗೆ ಪ್ರೋತ್ಸಾಹ ಜಾಹೀರಾತು ತಲುಪಬೇಕಿದೆ. ಹಾಗಾಗಿ ಇದಕ್ಕೆ ಕಡಿವಾಣ ಹಾಕುವ ಅಗತ್ಯವಿರುವುದರಿಂದ ರಾಜ್ಯದ ಎಲ್ಲಾ ಮಾಧ್ಯಮದವರು ಸಹಕರಿಸಬೇಕೆಂದರು.

ಸಾಮಾಜಿಕ ಜಾಲತಾಣ, ಡಿಜಿಟಲ್ ಯುಗದಲ್ಲಿ ನಿಜವಾದ ಪತ್ರಕರ್ತ ಯಾರು ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಯಾರು ಪತ್ರಕರ್ತ ಎಂಬುದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಗಂಭೀರ ಚರ್ಚೆಯಾಗಬೇಕಿದೆ. ಪಿಆರ್ ಜಿಐ ಪತ್ರಿಕೆಗಳ ನೋಂದಣಿ, ನಿರ್ವಹಣೆ ಕುರಿತು ಗಮನಹರಿಸುತ್ತಿದೆ. ಆದರೆ ಇಂದಿನ ಡಿಜಿಟಲ್ ಯುಗದಲ್ಲಿ "ಪತ್ರಕರ್ತ" ಯಾರು ಎಂಬುದು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಅಗತ್ಯವಿದೆ ಎಂದು ಆಯುಕ್ತ ಅನುಚೇತ್ ಅವರು ಪ್ರತಿಪಾದಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಕಾರ್ಯಾಗಾರದ ಉದ್ದೇಶ ಕುರಿತು ಪ್ರಾಸ್ತಾವಿಕವಾಗಿ ಬೆಂಗಳೂರಿನ ದೂರದರ್ಶನ ಕೇಂದ್ರದ ಮುಖ್ಯಸ್ಥರಾದ ಬಿ.ಕೆ. ಕೇಶವಮೂರ್ತಿ ಅವರು ಮಾತನಾಡಿದರು, ಕಾರ್ಯಾಗಾರದಲ್ಲಿ ಎನ್.ಐ.ಸಿ ಉಪನಿರ್ದೇಶಕರಾದ ಗೌರವ್ ಶರ್ಮ್, ವಾರ್ತಾ ಇಲಾಖೆಯ ಹಿರಿಯ ಅಧಿಕಾರಿಗಳಾದ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ವಾರ್ತಾಧಿಕಾರಿಗಳು ಮತ್ತು ಸ್ಥಳೀಯ ಹಾಗೂ ಪ್ರಾದೇಶಿಕ ಪತ್ರಿಕೆಗಳ ಮಾಲೀಕರು, ಸಂಪಾದಕರುಗಳು ಉಪಸ್ಥಿತರಿದ್ದರು.

## ರಾಜ್ಯಮಟ್ಟದ ದಸರಾ ಸಿ.ಎಂ. ಕಪ್‌ನಲ್ಲಿ ಗಂಗಾವತಿ ಕ್ರೀಡಾಪಟುಗಳ ಗಮನಾರ್ಹ ಸಾಧನೆ ವುಶೂ ಸ್ಪರ್ಧೆಯಲ್ಲಿ ಏಳು ಕ್ರೀಡಾಪಟುಗಳಿಗೆ ಪದಕದ ಗರಿ,12 ಕ್ರೀಡಾಪಟುಗಳ ಭಾಗಿ

ಧೃತಿ ನ್ಯೂಸ್ ಸುದ್ದಿ

ಗಂಗಾವತಿ: ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಕ್ರೀಡಾ ಪ್ರಾಧಿಕಾರ ಹಾಗೂ ದಸರಾ ಕ್ರೀಡಾ ಉಪಸಮಿತಿಯ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ದಸರಾ ಸಿ.ಎಂ. ಕಪ್?2026 ಕ್ರೀಡಾಕೂಟದಲ್ಲಿ ಗಂಗಾವತಿ ತಾಲೂಕಿನ ವುಶೂ ಕ್ರೀಡಾಪಟುಗಳು ಗಮನಾರ್ಹ ಸಾಧನೆ ಮಾಡುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಬೇತಲ್ ಸಮೂಹ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಶಿಕ್ಷಕ ಹಾಗೂ ವುಶೂ ತರಬೇತುದಾರ ಬಾಬುಸಾಬ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದ ಕ್ರೀಡಾಪಟುಗಳು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಸಾಧನೆಯು ಗಂಗಾವತಿ ತಾಲೂಕಿನ ಕ್ರೀಡಾ ಕ್ಷೇತ್ರಕ್ಕೆ ಮತ್ತಷ್ಟು ಗೌರವ ತಂದಿದೆ. ಬೇತಲ್ ಸಮೂಹ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಹಾಗೂ ಪದವಿ ಕಾಲೇಜಿನ ಕ್ರೀಡಾಪಟುಗಳೊಂದಿಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಹೆಬೂಬನಗರ, ದೆಹಲಿ ಪಬ್ಲಿಕ್ ಶಾಲೆ ಹಾಗೂ ಸರೋಜಮ್ಮ ಪ್ರೌಢಶಾಲೆ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಒಟ್ಟು 12 ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು. ಇವರಲ್ಲಿ ಏಳು ಕ್ರೀಡಾಪಟುಗಳು ಪದಕಗಳನ್ನು ಗೆಲ್ಲುವ ಮೂಲಕ ಗಮನಾರ್ಹ ಸಾಧನೆ ಮಾಡಿರುವುದು ವಿಶೇಷವಾಗಿದೆ.

**ಪದಕ ವಿಜೇತ ಕ್ರೀಡಾಪಟುಗಳು:**




ಅನುಷಾ, ರಾಜಬಕ್ಷಿ, ಕೃತಿಕಾ.ಎಚ್., ಹೇಮಂತ್ ಕುಮಾರ್, ಚೈತ್ರಾ, ಮಂಜುನಾಥ್ ಹಾಗೂ ಮೊಹಮ್ಮದ್ ರಿಯಾನ್ ಅವರು ಪದಕಗಳನ್ನು ಗೆದ್ದು ಸಾಧನೆ ಮಾಡಿದ್ದಾರೆ. ಭಾಗವಹಿಸುವಿಕೆ ಪ್ರಮಾಣಪತ್ರ ಪಡೆದ ಕ್ರೀಡಾಪಟುಗಳು: ಐಶ್ವರ್ಯ, ದಾನಮ್ಮ, ಆಫ್ರಿನ್, ರೆಹಮಾನ್ ಬೀ ಹಾಗೂ ಶಿವರಾಜಗೌಡ ಅವರು ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಕ್ರೀಡಾ ಕೌಶಲವನ್ನು ಪ್ರದರ್ಶಿಸಿದ್ದಾರೆ. ಕ್ರೀಡಾಪಟುಗಳ ಸಾಧನೆಯ ಕುರಿತು ಮಾತನಾಡಿದ ತರಬೇತುದಾರ ಬಾಬುಸಾಬ ಅವರು, "ರಾಜ್ಯಮಟ್ಟದ ದಸರಾ ಸಿ.ಎಂ. ಕಪ್‌ನಲ್ಲಿ ನಮ್ಮ ಕ್ರೀಡಾಪಟುಗಳು ತೋರಿದ ಸಾಧನೆ ಹೆಮ್ಮೆಯ ವಿಷಯವಾಗಿದೆ. ನಿರಂತರ ಅಭ್ಯಾಸ, ಶಿಸ್ತು ಮತ್ತು ಆತ್ಮವಿಶ್ವಾಸವೇ ಈ ಯಶಸ್ಸಿನ ಪ್ರಮುಖ ಆಧಾರಗಳಾಗಿವೆ. ಏಳು ಕ್ರೀಡಾಪಟುಗಳು ಪದಕ ಗೆದ್ದಿರುವುದು ಸಂತಸ ತಂದಿದೆ ಹಾಗೂ ಇತರ ಕ್ರೀಡಾಪಟುಗಳಿಗೂ ಪ್ರೇರಣೆಯಾಗಿದೆ. ಈ ಸಾಧನೆಗೆ ಸಹಕಾರ ನೀಡಿದ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಮತ್ತು ಪಾಲಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ನಮ್ಮ ಕ್ರೀಡಾಪಟುಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಇನ್ನಷ್ಟು ಸಾಧನೆ ಮಾಡಲಿ ಎಂಬುದು ನನ್ನ ಆಶಯ," ಎಂದು ಹರ್ಷ ವ್ಯಕ್ತಪಡಿಸಿದರು.

ಗಂಗಾವತಿ ತಾಲೂಕಿನ ಕ್ರೀಡಾಪಟುಗಳ ಈ ಸಾಧನೆಗೆ ಬೇತಲ್ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಹೇಮಾ ಸುಧಾಕರ್, ಅಧ್ಯಕ್ಷ ರಾಜು ಸುಧಾಕರ್, ಕಾರ್ಯದರ್ಶಿ ಬ್ಯಾಬೇಜ್ ಮಿಲ್ಟನ್, ಖಜಾಂಚಿ ಸುಜಾತ ರಾಜು, ಪದವಿ ಕಾಲೇಜಿನ ಪ್ರಾಚಾರ್ಯ ಬಸವರಾಜ್ ಕೆ., ವುಶೂ ತರಬೇತುದಾರ ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಬಾಬುಸಾಬ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಪ್ರಾಂಶುಪಾಲರು, ಶಿಕ್ಷಣ ಸಂಯೋಜಕರು, ಸಿಬ್ಬಂದಿ ವರ್ಗ, ಪಾಲಕರು ಹಾಗೂ ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಹೊಸೂರು ಗ್ರಾಮದಲ್ಲಿ ಬಾಲಮೇಳ ಮಕ್ಕಳ ಪ್ರತಿಭೆ ಅನಾವರಣ



ಧೃತಿ ನ್ಯೂಸ್ ಸುದ್ದಿ

ಹೊಸಪೇಟೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಶನ್ ಸಹಯೋಗದಲ್ಲಿ ಹೊಸೂರು ಗ್ರಾಮದಲ್ಲಿ ಬಾಲಮೇಳ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಉಪ ನಿರ್ದೇಶಕ ಗಂಗಪ್ಪ ಮಾತನಾಡಿ, ಹಿಂದೆ ಅಂಗನವಾಡಿ ಕೇಂದ್ರಗಳನ್ನು ಉಪ್ಪಿಟ್ಟು ಶಾಲೆ, ಚಿತ್ರಾನ್ನ ಶಾಲೆ ಎನ್ನುತ್ತಿದ್ದರು. ಈಗ ಪೌಷ್ಟಿಕ ಆಹಾರದ ಜೊತೆಗೆ ಬೌದ್ಧಿಕ ಸಾಮರ್ಥ್ಯ, ಸೃಜನಶೀಲತೆ, ಕಲಿಕಾ ಆಸಕ್ತಿ ಬೆಳೆಸುವ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ ಎಂದರು. ಅಜೀಂ ಪ್ರೇಮ್ ಜೀ ಫೌಂಡೇಶನ್ ಸಹಯೋಗದಲ್ಲಿ ಮೌಲ್ಯಾಧಾರಿತ, ನೈತಿಕ ಶಿಕ್ಷಣದ ಜೊತೆಗೆ ಆಟ, ಹಾಡು, ಕಥೆ ಮೂಲಕ ಕಲಿಕೆಯನ್ನು ಆಸಕ್ತಿದಾಯಕವಾಗಿ ಕಲಿಸಲಾಗುತ್ತಿದೆ. ಬಾಲಮೇಳ ಮಕ್ಕಳ ಪ್ರತಿಭೆ ಗುರುತಿಸಲು, ಸರ್ವತೋಮುಖ ಬೆಳವಣಿಗೆಗೆ ಸಹಕಾರಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಿಡಿಪಿಒ ಹೊನ್ನೂರು ವಲಿ, ಪಿಡಿಒ ಗಂಗಾಧರ್, ಹಿರಿಯ ಮೇಲ್ವಿಚಾರಕಿ ಅಂಬುಜಾ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ವಲಯ ಮೇಲ್ವಿಚಾರಕಿ ಎಲ್.ಡಿ.ನದಾಫ್, ಮಿಷನ್ ಶಕ್ತಿ ಸಂಯೋಜಕಿ ವಿದ್ಯಾ, ಅಜೀಂ ಪ್ರೇಮ್ ಜೀ ಫೌಂಡೇಶನ್ ಜಿಲ್ಲಾ ಸಂಯೋಜಕರಾದ ಮಂಜುನಾಥ್, ದರ್ಶಿತಾ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಮಕ್ಕಳು, ಗ್ರಾಮಸ್ಥರು ಇದ್ದರು.

### ವಸತಿ ನಿಲಯದ ಅಡುಗೆ, ಸ್ವಚ್ಛತೆ ಕಾಪಾಡುವ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರದ ಸಮಾರೋಪ

## ತರಬೇತಿಯಲ್ಲಿ ನೀಡಲಾದ ಮಾರ್ಗಸೂಚಿಗಳನ್ನು ಪಾಲಿಸಿ : ಜಿಲ್ಲಾಧಿಕಾರಿ ಪೂವಿತಾ

ಧೃತಿ ನ್ಯೂಸ್ ಸುದ್ದಿ

ರಾಯಚೂರು: ಹಾಸ್ಟೆಲ್‌ಗಳಲ್ಲಿ ಅಡುಗೆ ತಯಾರಿಸುವಾಗ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ವಿದ್ಯಾರ್ಥಿಗಳಿಗೆ ಗುಣಮಟ್ಟದ, ಶುಚಿ ಹಾಗೂ ರುಚಿಯಾದ ಆಹಾರವನ್ನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತದ ವತಿಯಿಂದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ತರಬೇತಿಯಲ್ಲಿ ನೀಡಲಾದ ಮಾರ್ಗಸೂಚಿಗಳನ್ನು ಪಾಲಿಸಬೇಕೆಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಹೇಳಿದರು.

ಅಕ್ಟೋಬರ್ 17ರ ಶನಿವಾರ ದಂದು ರಾಯಚೂರು ನಗರದ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನ್ ರಾಮ್ ಅವರ ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಕ್ರೈಸ್ ವಸತಿ ಶಾಲೆಯ ಅಧೀನದಲ್ಲಿರುವ ಖಾಯಂ / ಹೊರ ಸಂಪನ್ಮೂಲ ಡಿ–ಗ್ರೂಪ್ ಸಿಬ್ಬಂದಿಗಳಿಗೆ ಅಡುಗೆ ತಯಾರಿಸುವ ಮತ್ತು ಸ್ವಚ್ಛತೆಯನ್ನು ಕಾಪಾಡುವ ಕುರಿತು ಮೂರನೇಯ



ದಿನದ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಅಡುಗೆ ಮಾಡುವಷ್ಟೇ ಕಾಳಜಿ, ಶುಚಿತ್ವ ಮತ್ತು ಜವಾಬ್ದಾರಿಯಿಂದ ಹಾಸ್ಟೆಲ್ ಮಕ್ಕಳಿಗೂ ಅಡುಗೆ ಮಾಡಬೇಕು. ಒಂದು ವೇಳೆ ಯಾವುದಾದರೂ ಪದಾರ್ಥ ಖಾಲಿಯಾದರೆ ಮತ್ತೊಂದು ಪದಾರ್ಥವನ್ನು ಬಳಸುವಾಗ ಅಥವಾ ಬದಲಾಯಿಸುವಾಗ ಅದರ ಸಾಧಕ–ಬಾಧಕಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದರು.

ಹಾಸ್ಟೆಲ್‌ನಲ್ಲಿ ಸಾವಿರಾರು ಮಕ್ಕಳಿಗೆ ಒಟ್ಟಾಗಿ ಅಡುಗೆ ಮಾಡುವಾಗ ಸಣ್ಣ ಪ್ರಮಾದವಾದರೂ ಅದು ಒಬ್ಬರಿಗೆ ಮಾತ್ರ ಸೀಮಿತವಾಗದೆ, ಇಡೀ ಹಾಸ್ಟೆಲ್ ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಇತ್ತೀಚೆಗೆ ನಡೆದ ಕೆಲವು ಸಣ್ಣಪುಟ್ಟ ಘಟನೆಗಳನ್ನು ಗಮನದಲ್ಲಿಟ್ಟುಕೊಂಡು, ಭವಿಷ್ಯದಲ್ಲಿ ಇಂತಹ ಯಾವುದೇ ಲೋಪಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯವಾಗಿದೆ ಎಂದರು.

ಕೇವಲ ಮಾತಿಗೆ ಅಥವಾ ಸೂಚನೆಗೆ ಮಾತ್ರ ಸೀಮಿತಗೊಳ್ಳದೆ, ಪ್ರತಿ ಆರು ತಿಂಗಳಿಗೊಮ್ಮೆ ನಿಯಮಿತವಾಗಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಅಲ್ಲದೆ, ಉತ್ತಮ ಕಾರ್ಯಕ್ಷಮತೆ ಹೊಂದಿರುವ ಹಾಸ್ಟೆಲ್‌ಗಳನ್ನು ಗುರುತಿಸಿ, ಅಲ್ಲಿನ ಸಿಬ್ಬಂದಿಯನ್ನು ಇತರರಿಗೆ ಮಾದರಿಯಾಗಿ ಪರಿಚಯಿಸಲು ತರಬೇತಿ ನೀಡಲಾಗುವುದು ಎಂದರು. ಯಾವುದೇ ಹಂತದಲ್ಲಿಯೂ ಸಿಬ್ಬಂದಿಯಿಂದ ನಿರ್ಲಕ್ಷ್ಯ ಅಥವಾ ತಪ್ಪುಗಳು ಆಗಬಾರದು. ಒಂದು ವೇಳೆ ದೂರುಗಳು ಬಂದರೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು, ಯಾವುದೇ ದೂರುಗಳು ಇಲ್ಲದಿದ್ದರೆ ಇಲಾಖೆಯಿಂದ ಸಂಪೂರ್ಣ ಬೆಂಬಲವಿರುತ್ತದೆ. ಇದೇ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಹರೀಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ನಂದಿತಾ ಎಮ್.ಎನ್., ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಶಾವಂತಗೇರ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಮಾನಪ್ಪ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರವೀಣ್ ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ವಸತಿ ಶಾಲೆಯ ಪ್ರಾಂಶುಪಾಲರು, ನಿಲಯ ಪಾಲಕರು, ಅಡುಗೆ ಸಿಬ್ಬಂದಿಗಳು, ಸಹಾಯಕರು ಇದ್ದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಅಧಿಕಾರಿಗಳನ್ನು ಬೆದರಿಸಿ ಆಡಳಿತ ನಡೆಸುತ್ತಿದ್ದಾರೆ : ಸಿಎಂ ವಿರುದ್ಧ ಸೋಮಣ್ಣ ವಾಗ್ದಾಳಿ



ಮಧುಗಿರಿ: ರಾಜ್ಯದ ಮುಖ್ಯಮಂತ್ರಿ ಸರಿಯಾಗಿ ಆಡಳಿತ ನಡೆಸುತ್ತಿಲ್ಲ. ಅಧಿಕಾರಿಗಳಿಗೆ ಬೆದರಿಕೆ ಹಾಕಿ ಆಡಳಿತ ನಡೆಸುತ್ತಿದ್ದಾರೆ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಆರೋಪಿಸಿದರು. ಪಟ್ಟಣದಲ್ಲಿ ಆಗ್ನೇಯ ಪದವೀಧರರ ಕ್ಷೇತ್ರದ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಕೆ.ಎಂ. ಸುರೇಶ್ ಪರವಾಗಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ದೇಶದಾದ್ಯಂತ ಎಸ್‌ಐಆರ್ ಕಾರ್ಯಕ್ರಮ ಸಮರ್ಪಕವಾಗಿ ನಡೆಯುತ್ತಿದೆ ಎಂದರು.

ಎಸ್‌ಐಆರ್ ವಿಚಾರವಾಗಿ ಕೊಪ್ಪಳದಲ್ಲಿ ವಿಡಿಯೋ ಕಾನ್ಫರ್ಸೆ? ಮೂಲಕ ಮುಖ್ಯಮಂತ್ರಿಗಳು ಡಿಸಿಯವರನ್ನು ವಿಚಾರಿಸುತ್ತಿದ್ದಾಗ 48 ಸಾವಿರ ಮತಗಳು ಡಿಲೀಟ್ ಆಗಿರುವ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಆಗ ಅಧಿಕಾರಿಗಳು ಹೊರರಾಜ್ಯದಿಂದ ಬಂದು ವಾಪಸ್ ಹೋಗಿರುವವರು, ಮತಪಟ್ಟಿರುವವರು ಹಾಗೂ ಎರಡು ಮೂರು ಕಡೆ ಮತ ಇರುವವರು ಎಲ್ಲರನ್ನು ಡಿಲೀಟ್ ಮಾಡಿರುವ ಬಗ್ಗೆ ಮಾಹಿತಿ ನೀಡಿದಾಗ ಸಿಎಂ ಅಸಮಾಧಾನ ವ್ಯಕ್ತಪಡಿಸಿರುವುದು ಅವರ ಬೆದರಿಕೆಯ ದೋರಣೆಯನ್ನು ತೋರಿಸುತ್ತದೆ ಎಂದು ದೂರಿದರು. ಮೋದಿ ಇಲ್ಲದ ದೇಶ ಊಹಿಸಲೂ ಸಾಧ್ಯವಿಲ್ಲ:

ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತು ಮಾತನಾಡಿದ ಸೋಮಣ್ಣ, ಮೋದಿ ಇಲ್ಲದ ದೇಶವನ್ನು ಊಹಿಸಲೂ ಸಾಧ್ಯವಿಲ್ಲ. ದೇಶದ 25 ಕೋಟಿ ಅಸಹಾಯಕ ಕುಟುಂಬಗಳನ್ನು ಮೋದಿ ಸಮಾಜದ ಮುಖ್ಯ ವಾಹಿನಿಗೆ ತಂದಿದ್ದಾರೆ. ಗಾಂಭಿರ್ಯ ಇಲ್ಲದ ಓರ್ವ ಮುಖ್ಯಮಂತ್ರಿ ರಾಜ್ಯದ ಚುನಾವಣಾಧಿಕಾರಿ ಕಚೇರಿಗೆ ಹೋಗಿ ಕುಳಿತಿದ್ದಾರೆ. ಎಸ್‌ಐಆರ್ ಒಂದೇ ಸದ್ಯ ಕಾಂಗ್ರೆಸ್ ಬತ್ತಳಿಕೆಯಲ್ಲಿರುವ ಅಸ್ತ್ರ ಎಂದು ಲೇವಡಿ ಮಾಡಿದರು. ಮಿಂಚಿನ ಪ್ರಚಾರ : ಮಧುಗಿರಿಯಲ್ಲಿ ಸೋಮಣ್ಣ ಆಗ್ನೇಯ ಪದವೀಧರ ಕ್ಷೇತ್ರದ ಎನ್.ಡಿ.ಎ ಅಭ್ಯರ್ಥಿ ಸುರೇಶ್ ಪರ ಮಿಂಚಿನ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ, ಬಿಜೆಪಿ ಜಿಲ್ಲಾಧ್ಯಕ್ಷ ರವಿ ಹೆಬ್ಬಾಕ, ವಿಧಾನ ಪರಿಷತ್ ಸದಸ್ಯ ಚಿದಾನಂದ ಗೌಡ, ತಾಲ್ಲೂಕು ಬಿಜೆಪಿ ಅಧ್ಯಕ್ಷ ಶ್ರೀ ಹನುಮಂತ ಜೆಡಿಎಸ್‌ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್, ಜಿ.ಪಂ ಮಾಜಿ ಅಧ್ಯಕ್ಷ ಹುಚ್ಚಯ್ಯ, ತುಮುಲ್ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್, ಪುರಸಭಾ ಮಾಜಿ ಸದಸ್ಯರಾದ ಜಗನ್ನಾಥ್, ಚಂದ್ರಶೇಖರ್ ಬಾಬು, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕಷ್ಣಪ್ಪ, ಎಲ್ ಸಿ ನಾಗರಾಜು, ಚಿಕ್ಕ ಒಬ್ಬಳರೆಡ್ಡಿ, ಪಾಂಡುರಂಗ ರೆಡ್ಡಿ ಇತರರಿದ್ದರು.

## ಪ್ರತಿಭಟನಾನಿರತ ರೈತರ ಜೊತೆ ಇಂದು ಸಿಎಂ ಡಿಕೆಶಿ ಚರ್ಚೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಇಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ.ಇಂದು ಸಂಜೆ ವಿಶೇಷ ವಿಮಾನದಲ್ಲಿ ಬೆಳಗಾವಿಗೆ ತಲುಪಲಿರುವ ಡಿ.ಕೆ.ಶಿವಕುಮಾರ್ ಅಲ್ಲಿಂದ ಕಿತ್ತೂರಿಗೆ ತೆರಳಿ ಅಲ್ಲಿ ರೈತರ ಜೊತೆ ಸಮಾಲೋಚನೆ ನಡೆಸಲಿದ್ದಾರೆ.



ಪ್ರತಿ ಟನ್ ಕಬ್ಬಿಗೆ 6000 ರೂ. ಎಫ್‌ಆರ್‌ಪಿ ದರ ನಿಗದಿ ಮಾಡಬೇಕು. ಪ್ರತಿ ಕೆ.ಜಿ. ಸಕ್ಕರೆಗೆ 60 ರೂ. ಎಂಆರ್‌ಪಿ ನಿಗದಿ ಮಾಡಬೇಕು. ರಾಜ್ಯದಲ್ಲಿ ಉತ್ಪಾದನೆಯಾಗುವ ಎಥೆನಾಲ್ ಅನ್ನು ಪೂರ್ಣ ಪ್ರಮಾಣದಲ್ಲಿ ಕೇಂದ್ರ ಸರ್ಕಾರ ನೇರವಾಗಿ ಖರೀದಿಸಬೇಕು ಎಂಬ ಪ್ರಮುಖ ಬೇಡಿಕೆಗಳೊಂದಿಗೆ ಕಳೆದ ಸೋಮವಾರ ಮಧ್ಯರಾತ್ರಿಯಿಂದ ಹೆದ್ದಾರಿ ತಡೆ ಆರಂಭಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಬೆಳಗಾವಿ, ಬಾಗಲಕೋಟೆ, ಹಾವೇರಿ, ರಾಯಚೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ ಸೇರಿದಂತೆ ವಿವಿಧ ಕಡೆಗಳಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ಕಬ್ಬು ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಗಾಗಿ ಅಧ್ಯಯನಕ್ಕಾಗಿ ಪ್ರತ್ಯೇಕ ಸಮಿತಿ ರಚಿಸಿದೆ. ಆದರೆ ರೈತರು ಪ್ರತಿಭಟನೆಯಿಂದ ಹಿಂದೆ ಸರಿದಿಲ್ಲ. ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ನಡೆಸುವುದಾಗಿ ಪಟ್ಟು ಹಿಡಿದಿದ್ದಾರೆ.ಹೆದ್ದಾರಿ ತಡೆ ಜೊತೆಗೆ ರೈತರ ಪಾದಯಾತ್ರೆ ಕೂಡ ಆರಂಭವಾಗಿದೆ. ಹುಕ್ಕೇರಿಯ ಹತ್ತರಗಿ ಟೋಲ್‌ನಿಂದ ಆರಂಭವಾಗಿರುವ ಪಾದಯಾತ್ರೆ ಇಂದು ಕಿತ್ತೂರು ತಲುಪಿದೆ. ಪ್ರತಿಭಟನೆಯಲ್ಲಿ ಮಾಜಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕೂಡ ಭಾಗಿಯಾಗಿದ್ದಾರೆ. ಬಹುತೇಕ ಬೇಡಿಕೆಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದಾಗಿವೆ. ರಾಜ್ಯ ಸರ್ಕಾರ ಕಬ್ಬು ಹಾಗೂ ಅದರ ಉತ್ಪನ್ನಗಳಿಂದ ವಸೂಲಿ ಮಾಡುವ ತೆರಿಗೆಯಲ್ಲಿ ಪ್ರತಿ ಟನ್‌ಗೆ 1 ಸಾವಿರ ರೂ. ಬೆಂಬಲ ಬೆಲೆ ನೀಡಬೇಕು ಎಂದು ರೈತರು ಆಗ್ರಹಿಸಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸರ್ಕಾರ ರೈತರ ಬೇಡಿಕೆಗಳ ವಿಚಾರವಾಗಿ ಸಕಾರಾತಕವಾಗಿ ವಿವಿಧ ಹಂತಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಹೀಗಾಗಿ ಯಾರೂ ತಾಳೆ ಕಳೆದುಕೊಳ್ಳಬಾರದು, ಸಹನೆಯಿಂದಿರಬೇಕು ಎಂದು ಡಿ.ಕೆ.ಶಿವಕುಮಾರ್ ಕರೆ ನೀಡಿದರು. ಇಂದು ಖುದ್ದು ರೈತರನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಬಸ್ ಟಿಕೆಟ್ ದರ ಡಬಲ್ : ಹಬ್ಬಕ್ಕೆ ಬೆಂಗಳೂರಿನಿಂದ ಊರುಗಳತ್ತ ತೆರಳುವವರ ಜೇಬಿಗೆ 'ಖಾಸಗಿ' ಕತ್ತರಿ

ಬೆಂಗಳೂರು: ನವರಾತ್ರಿ, ಆಯುಧ ಪೂಜೆ, ವಿಜಯದಶಮಿ ಹಾಗೂ ದಸರಾ ರಜೆಗಳ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಭಾಗಗಳಿಗೆ ತೆರಳುವ ಪ್ರಯಾಣಿಕರಿಗೆ ಖಾಸಗಿ ಬಸ್ ಪ್ರಯಾಣದ ದರ ಆಘಾತ ತೀವ್ರವಾಗಿದೆ. ಹಬ್ಬದ ಸಂಭ್ರಮದಲ್ಲಿ ಊರಿಗೆ ತೆರಳಬೇಕಾದ ಅನಿವಾರ್ಯತೆ ಒಂದೆಡೆಯಾದರೆ, ದುಬಾರಿ ಟಿಕೆಟ್ ಖರೀದಿಸುವ ಸಂಕಷ್ಟ ಮತ್ತೊಂದೆಡೆಯಾಗಿದೆ.

ಆನ್‌ಲೈನ್ ಟಿಕೆಟ್ ದರಗಳ ಕುರಿತ ಮಾಹಿತಿಯ ಪ್ರಕಾರ, ಬೆಂಗಳೂರು-ಮಂಗಳೂರು ಮಾರ್ಗದಲ್ಲಿ ವಿವಿಧ ಬಗೆಯ ಖಾಸಗಿ ಬಸ್‌ಗಳ ದರಗಳಲ್ಲಿ ಗಮನಾರ್ಹ ವ್ಯತ್ಯಾಸ ಕಂಡುಬಂದಿದೆ.ಬೆಂಗಳೂರು ಸೇರಿದಂತೆ ದಸರಾ ರಜೆ ಹಿನ್ನೆಲೆಯಲ್ಲಿ ಖಾಸಗಿ ಸ್ಲೀಪರ್ ಬಸ್‌ಗಳ ದರ 500ರಿಂದ 1,100ಕ್ಕೆ ಏರಿರುವುದಾಗಿ ತಿಳಿದು ಬಂದಿದೆ. ಇದು ಶೇ. 120ರಷ್ಟು ಏರಿಕೆಯಾಗಿದೆ. ಬೆಂಗಳೂರು-ಮಂಗಳೂರು ಮಾರ್ಗದಲ್ಲಿ 1400 ರೂ. ಬೆಂಗಳೂರು-ಹುಬ್ಬಳ್ಳಿ ಮಾರ್ಗಕ್ಕೆ 1600 ರೂ, ಬೆಂಗಳೂರು-ಹೊಸಪೇಟೆ 1300 ರೂ., ಬೇಂಗಳೂರು-ಶಿವಮೊಗ್ಗ 1000 ರೂ. ಗಳಿಗಿಂತಲೂ ಹೆಚ್ಚಿನ ದರ ನಿಗದಿಯಾಗಿದೆ. ಬೆಂಗಳೂರು ರಾಜ್ಯದ ಪ್ರಮುಖ ಉದ್ಯೋಗ, ಶಿಕ್ಷಣ ಮತ್ತು ವ್ಯಾಪಾರ ಕೇಂದ್ರವಾಗಿರುವುದರಿಂದ ಇಲ್ಲಿಂದ ಮಂಗಳೂರು, ಉಡುಪಿ, ಕುಂದಾಪುರ, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಕಲಬುರಗಿ, ಬಳ್ಳಾರಿ, ದಾವಣಗೆರೆ, ಮೈಸೂರು ಹಾಗೂ ಇತರ ನಗರಗಳಿಗೆ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದೆ. ಹಬ್ಬದ ಸಂದರ್ಭದಲ್ಲಿ ಕುಟುಂಬದ ನಾಲ್ಕು ಅಥವಾ ಐದು ಸದಸ್ಯರು ಒಟ್ಟಿಗೆ ಪ್ರಯಾಣಿಸಿದರೆ, ಸಾಮಾನ್ಯ ದಿನಗಳಿಗಿಂತ ಸಾವಿರಾರು




ರೂಪಾಯಿ ಹೆಚ್ಚುವರಿ ವೆಚ್ಚವಾಗುವ ಸಾಧ್ಯತೆಯಿದೆ. ವಿದ್ಯಾರ್ಥಿಗಳು, ಕಡಿಮೆ ವೇತನದ ಉದ್ಯೋಗಿಗಳು, ವಯೋವೃದ್ಧರು ಮತ್ತು ಮಕ್ಕಳೊಂದಿಗೆ ಪ್ರಯಾಣಿಸುವ ಕುಟುಂಬಗಳಿಗೆ ಈ ಹೊರೆ ಮತ್ತಷ್ಟು ತೀವ್ರವಾಗುತ್ತದೆ. ಬಸ್ ನಿರ್ವಾಹಕರು ಬೇಡಿಕೆ, ನಿರ್ವಹಣಾ ವೆಚ್ಚ, ಇಂಧನ, ಸಿಬ್ಬಂದಿ ವೇತನ ಹಾಗೂ ಖಾಲಿಯಾಗಿ ಹಿಂದಿರುಗುವ ಬಸ್‌ಗಳ ವೆಚ್ಚವನ್ನು ದರ ಏರಿಕೆಗೆ ಸಮರ್ಥನೆ ನೀಡುತ್ತಿದ್ದಾರೆ. ಆದರೆ ಪ್ರಯಾಣಿಕರಿಗೆ ಅಗತ್ಯವಿರುವ ಸಮಯದಲ್ಲೇ ದರವನ್ನು ಹಲವು ಪಟ್ಟು ಹೆಚ್ಚಿಸುವುದು ಎಷ್ಟು ಸಮಂಜಸ ಎಂಬುದು ಚರ್ಚೆಯ ವಿಷಯವಾಗಿದೆ. ಖಾಸಗಿ ಬಸ್‌ಗಳ ದರ ಅನಿಯಂತ್ರಿತವಾಗಿ ಏರಿಕೆಯನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಳೆದ ತಿಂಗಳ ಗಣೇಶ ಹಬ್ಬದ ಸಂದರ್ಭದಲ್ಲಿ ಅತಿಯಾದ ದರ ವಸೂಲಿ ಸೇರಿದಂತೆ ವಿವಿಧ ನಿಯಮ ಉಲ್ಲಂಘನೆಗಳ ವಿರುದ್ಧ ರಾಜ್ಯಾದ್ಯಂತ ಐದು ದಿನಗಳ ವಿಶೇಷ ಕಾರ್ಯಾಚರಣೆಯನ್ನು ಸಾರಿಗೆ ಇಲಾಖೆ ನಡೆಸಿತ್ತು. ಆ ವೇಳೆ 14,987 ಖಾಸಗಿ ಬಸ್‌ಗಳನ್ನು ತಪಾಸಣೆ ನಡೆಸಿ, 3,756 ಪ್ರಕರಣಗಳನ್ನು ದಾಖಲಿಸಲಾಗಿತ್ತು. 33 ವಾಹನಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಒಟ್ಟು 73.6 ಲಕ್ಷ ದಂಡ ಸಂಗ್ರಹಿಸಲಾಗಿತ್ತು. ಬೆಂಗಳೂರು-ಹುಬ್ಬಳ್ಳಿ ಪ್ರಯಾಣಕ್ಕೆ ಒಬ್ಬ ಪ್ರಯಾಣಿಕರಿಂದ 7,000 ವಸೂಲಿ ಮಾಡಿದ ಪ್ರಕರಣವೂ ನಡೆದಿತ್ತು.

ಹಬ್ಬದ ಅವಧಿಯಲ್ಲಿ ದರ ಏರಿಕೆಯ ವಿರುದ್ಧ ಕೇವಲ ತಪಾಸಣೆ ಮತ್ತು ದಂಡ ವಿಧಿಸುವುದರಿಂದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುತ್ತಿಲ್ಲ ಎಂಬ ಆಕ್ಷೇಪಗಳಿವೆ.ಪ್ರತಿಯೊಂದು ಖಾಸಗಿ ಬಸ್ ನಿರ್ವಾಹಕರು ಸಾಮಾನ್ಯ ದಿನದ ದರ, ಹಬ್ಬದ ದಿನದ ದರ ಹಾಗೂ ಹೆಚ್ಚುವರಿ ಶುಲ್ಕಗಳ ವಿವರಗಳನ್ನು ಸ್ಪಷ್ಟವಾಗಿ ಪ್ರಕಟಿಸುವ ವ್ಯವಸ್ಥೆ ರೂಪಿಸಬೇಕಿದೆ. ಆನ್‌ಲೈನ್‌ನಲ್ಲಿ ಹೆಚ್ಚಿನ ದರ ಕಂಡುಬಂದಾಗ ಪ್ರಯಾಣಿಕರು ತಕ್ಷಣ ದೂರು ಸಲ್ಲಿಸಲು ಸರಳ ವ್ಯವಸ್ಥೆ ಕಲ್ಪಿಸುವುದು. ಹಬ್ಬದ ರಜೆ ಆರಂಭವಾಗುವ ಮೊದಲು ಆನ್‌ಲೈನ್ ಟಿಕೆಟ್ ದರಗಳ ಪರಿಶೀಲನೆ ನಡೆಸುವುದು. ಅನ್ವಯಿಸುವ ಕಾನೂನು ಮತ್ತು ಪರವಾನಗಿ ನಿಯಮಗಳ ಪ್ರಕಾರ ಅತಿಯಾದ ದರ ವಸೂಲಿ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವುದು. ಬೇಡಿಕೆ ಹೆಚ್ಚಿರುವ ಮಾರ್ಗಗಳಲ್ಲಿ ಕೆ-ಎಸ್‌ಆರ್‌ಟಿಸಿ ಹೆಚ್ಚುವರಿ ಬಸ್ ಸೇವೆಗಳನ್ನು ಕಲ್ಪಿಸಿ ಖಾಸಗಿ ಬಸ್‌ಗಳ ಮೇಲಿನ ಒತ್ತಡ ಕಡಿಮೆ ಮಾಡುವ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕಿದೆ. ದಸರಾ ಆಯುಧಪೂಜೆ ಅಂಗವಾಗಿ ಹೆಚ್ಚುವರಿಯಾಗಿ 3 ಸಾವಿರ ಬಸ್‌ಗಳ ಸೇವೆಯನ್ನು ಆರಂಭಿಸಿರುವುದಾಗಿ ಸಾರಿಗೆ ನಿಗಮಗಳು ಹೇಳುತ್ತಿವೆ. ದಸರಾ ಅಂಗವಾಗಿ ಮೈಸೂರಿಗೆ 700 ಬಸ್‌ಗಳನ್ನು ನಿಯೋಜಿಸಲಾಗಿದೆ. ಅದರೂ ಒತ್ತಡ ಕಡಿಮೆಯಾಗಿಲ್ಲ.

ಹಬ್ಬಗಳು ಜನರ ಸಂತೋಷ, ಕುಟುಂಬದ ಒಗ್ಗಟ್ಟು ಮತ್ತು ಸಾಂಸ್ಕೃತಿಕ ಸಂಭ್ರಮದ ಸಂಕೇತ. ಆದರೆ ಆ ಸಂಭ್ರಮಕ್ಕಾಗಿ ಊರಿಗೆ ತೆರಳುವ ಪ್ರಯಾಣಿಕರು ದುಬಾರಿ ಟಿಕೆಟ್ ದರದ ಹೊರೆ ಹೊರುವಂತಾಗುವುದು ವಿಷಾದನೀಯ. ಖಾಸಗಿ ಬಸ್‌ಗಳ ಕಾರ್ಯಾಚರಣೆಯ ವೆಚ್ಚ ಮತ್ತು ವಾಣಿಜ್ಯ ಹಿತಾಸಕ್ತಿಗಳನ್ನು ಪರಿಗಣಿಸುವುದು ಅಗತ್ಯವಾದರೂ, ಪ್ರಯಾಣಿಕರ ಹಿತಾಸಕ್ತಿಯೂ ಅಷ್ಟೇ ಮುಖ್ಯ ಎಂಬ ವಾದಗಳಿವೆ. ನಿಯಮಬಾಹಿರ ದರ ವಸೂಲಿಯನ್ನು ತಡೆಯಲು ಸರ್ಕಾರದ ಕ್ರಮಗಳು ನಿರಂತರವಾಗಿರಬೇಕು. ದೂರು ಬಂದ ನಂತರವೇ ಕಾರ್ಯಾಚರಣೆ ನಡೆಸುವುದಕ್ಕಿಂತ, ಹಬ್ಬದ ಅವಧಿಯ ಬೇಡಿಕೆಯನ್ನು ಮುಂಚಿತವಾಗಿ ಅಂದಾಜಿಸಿ ನಿಯಂತ್ರಣ ಮತ್ತು ಪರ್ಯಾಯ ಸಾರಿಗೆ ವ್ಯವಸ್ಥೆಗಳನ್ನು ರೂಪಿಸುವುದು ಸೂಕ್ತ.

# ನಮ್ಮ ಮೆಟ್ರೋದ ಗುಲಾಬಿ ಮಾರ್ಗದ ಮೆಟ್ರೋ ಉದ್ಘಾಟನೆಗೆ ಮೋದಿಗೆ ಆಹ್ವಾನ

ಬೆಂಗಳೂರು: ಬಹುನಿರೀಕ್ಷಿತ ನಮ ಮೆಟ್ರೋದ ಗುಲಾಬಿ ಮಾರ್ಗದ ಮೊದಲ ಹಂತದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಿಎಂ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿದ್ದಾರೆ.ಈ ಕುರಿತಂತೆ ಪ್ರಧಾನಿಗಳಿಗೆ ಪತ್ರ ಬರೆದಿರುವ ಸಿಎಂ, ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿಲೋಮೀಟರ್ ಉದ್ದದ ಎತ್ತರಿಸಿದ ಮೆಟ್ರೋ ಮಾರ್ಗವನ್ನು ಉದ್ಘಾಟಿಸಲು ದಿನಾಂಕ ನಿಗದಿಪಡಿಸುವಂತೆ ಪ್ರಧಾನಿಯವರಿಗೆ ಮನವಿ ಮಾಡಿಕೊಂಡಿದ್ದಾರೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಈ ತಿಂಗಳ ಕೊನೆಯ ವಾರ ಅಥವಾ ನವೆಂಬರ್ ಮೊದಲ ವಾರದಲ್ಲಿ ಗುಲಾಬಿ ಮಾರ್ಗ ಸಾರ್ವಜನಿಕರ ಸಂಚಾರಕ್ಕೆ ಮುಕ್ತವಾಗುವ ನಿರೀಕ್ಷೆಯಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸಮಯಾವಕಾಶದ ಆಧಾರದ ಮೇಲೆ ಉದ್ಘಾಟನಾ ದಿನಾಂಕ ಅಂತಿಮಗೊಳ್ಳುವ ಸಾಧ್ಯತೆಯಿದೆ. ಒಂದು ವೇಳೆ ಪ್ರಧಾನಿ ಕಾರ್ಯಕ್ರಮಕ್ಕೆ ಆಗಮಿಸಲು ಸಾಧ್ಯವಾಗದಿದ್ದರೆ, ನವೆಂಬರ್ 1ರ ಕನ್ನಡ ರಾಜ್ಯೋತ್ಸವದಂದು ಮಾರ್ಗವನ್ನು ಲೋಕಾರ್ಪಣೆ ಮಾಡುವ ಪರ್ಯಾಯ ಚಿಂತನೆಯೂ ನಡೆದಿದೆ ಎಂದು ಮೂಲಗಳು ತಿಳಿಸಿವೆ.

**103.6 ಕಿ.ಮೀ.ಗೆ ವಿಸ್ತರಣೆಯಾಗುವ ಮೆಟ್ರೋ ಜಾಲ;**

ಗುಲಾಬಿ ಮಾರ್ಗದ ಈ ಎತ್ತರಿಸಿದ ವಿಭಾಗ ಕಾರ್ಯಾರಂಭ ಮಾಡಿದರೆ ಬೆಂಗಳೂರಿನ ನಮ್ಮ ಮೆಟ್ರೋ ಜಾಲದ ಒಟ್ಟು ಉದ್ದ 103.6 ಕಿಲೋಮೀಟರ್‌ಗೆ ವಿಸ್ತರಣೆಯಾಗಲಿದೆ. ಇದರೊಂದಿಗೆ ಬೆಂಗಳೂರು ದೇಶದಲ್ಲೇ ಎರಡನೇ ಅತಿ ದೊಡ್ಡ ಮೆಟ್ರೋ ಜಾಲ ಹೊಂದಿರುವ ನಗರ ಎಂಬ ಹೆಗ್ಗಳಿಕೆಯನ್ನು ಪಡೆದುಕೊಳ್ಳಲಿದೆ. ನಗರದ ದಕ್ಷಿಣ ಭಾಗದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಈ ಮಾರ್ಗ ಮಹತ್ವದ್ದಾಗಿದೆ. ಕಾಳೇನ ಅಗ್ರಹಾರ, ಬೊಮ್ಮನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ತಾವರೆಕೆರೆ ಭಾಗದ ಪ್ರಯಾಣಿಕರಿಗೆ ಮೆಟ್ರೋ ಸೇವೆ ಅನುಕೂಲ ಕಲ್ಪಿಸಲಿದೆ. ರಸ್ತೆ ಸಂಚಾರದ ಮೇಲಿನ ಅವಲಂಬನೆ ಕಡಿಮೆಯಾಗುವುದರ ಜತೆಗೆ, ಪ್ರಮುಖ ವಾಣಿಜ್ಯ ಮತ್ತು ವಸತಿ ಪ್ರದೇಶಗಳ ನಡುವಿನ ಪ್ರಯಾಣದ ಸಮಯ ಉಳಿತಾಯವಾಗುವ ನಿರೀಕ್ಷೆಯಿದೆ.



ಆರು ನಿಲ್ದಾಣಗಳ ಮಾರ್ಗ:ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿ.ಮೀ. ಎತ್ತರಿಸಿದ ಮಾರ್ಗದಲ್ಲಿ ಒಟ್ಟು ಆರು ನಿಲ್ದಾಣಗಳಿವೆ. ಈ ಮಾರ್ಗದ ಪ್ರಮುಖ ಆಕರ್ಷಣೆ ಜಯದೇವ ಆಸ್ಪತ್ರೆ ಮೆಟ್ರೋ ನಿಲ್ದಾಣ. ಇದು ಗುಲಾಬಿ ಮಾರ್ಗ ಮತ್ತು ಹಳದಿ ಮಾರ್ಗದ ನಡುವೆ ಪ್ರಯಾಣಿಕರು ರೈಲು ಬದಲಾಯಿಸಲು ಅನುಕೂಲ ಕಲ್ಪಿಸುವ ಪ್ರಮುಖ ಇಂಟರ್‌ಚೇಂಜ್ ನಿಲ್ದಾಣವಾಗಿದೆ. ಜಯದೇವ ಆಸ್ಪತ್ರೆ ನಿಲ್ದಾಣವು ನಗರದ ಪ್ರಮುಖ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ವಾಣಿಜ್ಯ ಪ್ರದೇಶಗಳಿಗೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಳದಿ ಮಾರ್ಗದೊಂದಿಗೆ ಸಂಪರ್ಕ ಕಲ್ಪಿಸುವುದರಿಂದ ದಕ್ಷಿಣ ಬೆಂಗಳೂರಿನ ವಿವಿಧ ಭಾಗಗಳಿಗೆ ಮೆಟ್ರೋ ಮೂಲಕ ಸಂಚರಿಸುವುದು ಇನ್ನಷ್ಟು ಸುಲಭವಾಗಲಿದೆ.

# 'ಸ್ಟಿಂಗ್' ವ್ಯಕ್ತಿಗೆ ಸರ್ಕಾರವೇ ಹೆದರುತ್ತಿದೆ : ಹೆಚ್ಡಿಕೆ

ಬೆಂಗಳೂರು: ಸ್ಟಿಂಗ್ ಆಪರೇಷನ್ ಮಾಡಿದ ಆರೋಪಕ್ಕೆ ಒಳಗಾಗಿರುವ ವ್ಯಕ್ತಿಗೆ ಸರ್ಕಾರವೇ ಹೆದರುವ ಪರಿಸ್ಥಿತಿ ಉಂಟಾಗಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಲೋಕಭವನದಲ್ಲಿ ನೂತನ ರಾಜ್ಯಪಾಲರಾದ ಡಾ.ಸುಧಾ ಯಾದವ್ ಅವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ, ಗೃಹಸಚಿವರನ್ನು ಟ್ರ್ಯಾಪ್ ಮಾಡಿರಬಹುದು. ಪೊಲೀಸ್ ಅಧಿಕಾರಿಗಳ ಕಚೇರಿಯಲ್ಲಿ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತುಕೊಳ್ಳುತ್ತಾರೆ ಎಂದು ಆರೋಪಿಸಿದರು. ಮುಖ್ಯಮಂತ್ರಿಗಳು ಕಾಲವೇ ಉತ್ತರ ಕೊಡುತ್ತದೆ ಎಂದು ಹೇಳಿದ್ದಾರೆ. ಯಾವ ಕಾಲದಲ್ಲಿ ಏನು ಉತ್ತರ ಬರುತ್ತದೆ ಎಂಬುದನ್ನು ನಾವು ಕಾದು ನೋಡುತ್ತೇವೆ. ಸ್ಟಿಂಗ್ ಆಪರೇಷನ್ ಮಾಡಿದ ಆರೋಪಿತರನ್ನು ಬಂಧಿಸಲು ಸರ್ಕಾರಕ್ಕೆ ನೀಡಿದ ಎರಡು ದಿನಗಳ ಗಡುವು ಮುಗಿದಿದೆ. ಮುಂದೆ ಯಾವ ರೀತಿಯ ಹೋರಾಟ ಮಾಡಬೇಕು ಎಂಬ ಬಗ್ಗೆ ಪಕ್ಷದ ಕಚೇರಿಯಲ್ಲಿ ಶಾಸಕರು, ಪಕ್ಷದ ಮುಖಂಡರೊಂದಿಗೆ ಚರ್ಚಿಸಿ ತೀರ್ಮಾನಿಸುತ್ತೇವೆ ಎಂದು ಹೇಳಿದರು.



ಯಾರ ಮೇಲೂ ವೈಯಕ್ತಿಕವಾದ ದ್ವೇಷವಿಲ್ಲ. ಈ ದಿನದ ಪರಿಸ್ಥಿತಿಯಲ್ಲಿ ಸ್ಟಿಂಗ್ ಆಪರೇಷನ್ ಮೂಲಕ ಯಾರಿಗೂ ಗೌರವ ಬಾರದ ವಾತಾವರಣ ನಿರ್ಮಾಣವಾಗುತ್ತಿದೆ. ಇದಕ್ಕೆ ಸಂಪೂರ್ಣ ತೆರೆ ಎಳೆಯಬೇಕಿದೆ ಎಂದು ತಿಳಿಸಿದರು. ಮಾಧ್ಯಮಕ್ಕೆ ಕಳಂಕ ಬರುವ ರೀತಿಯಲ್ಲಿ ನಿರ್ಮಾಣವಾಗುತ್ತಿರುವ ವಾತಾವರಣ ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಿತ್ತು. ಆದರೆ ಸರ್ಕಾರ ಹಲವು ರೀತಿ ಕಾನೂನು ಬಾಹಿರವಾಗಿ ದುಡ್ಡು ಹೊಡೆಯಲು ಅವಕಾಶ ಮಾಡಿಕೊಡುತ್ತಿದೆ ಎಂದು ಆರೋಪಿಸಿದರು. ಆಡಳಿತದಲ್ಲಿ ಇಡೀ ದೇಶಕ್ಕೆ ಮಾದರಿಯಾಗಿದ್ದ ರಾಜ್ಯ ನಮದು. ಮಾಧ್ಯಮದ ಆಶ್ರಯ ಪಡೆದು ಸ್ಟಿಂಗ್ ಆಪರೇಷನ್ ಮಾಡಿರುವ ಆರೋಪಕ್ಕೆ ಒಳಗಾಗಿದ್ದಾರೆ. ಆಡಳಿತ ನಡೆಸುತ್ತಿರುವವರಿಗೂ ಸ್ಟಿಂಗ್ ಆಪರೇಷನ್ ಆಗಿದ್ದರೆ ಆಶ್ಚರ್ಯ ಪಡುವಂತಿಲ್ಲ. ಹೀಗಾಗಿ ಅವರು ಕೈಗೊಂಬೆ ಮಾಡಿಕೊಂಡಿರಬಹುದು ಎಂದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದಾರೆ. ಮುಖ್ಯಮಂತ್ರಿ ಹೆಸರು ಇಟ್ಟುಕೊಂಡು ಸ್ಟಿಂಗ್ ಆಪರೇಷನ್ ಮಾಡಲು ಹೊರಟಿದ್ದರು. ಮತ್ತೊಂದು ಸ್ಟಿಂಗ್ ಮೂಲಕ ತಡೆಯಲಾಯಿತು ಎಂದು ಹೇಳಿದ್ದಾರೆ. ಅಲ್ಲದೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೆ ಸ್ಟಿಂಗ್ ಆಪರೇಷನ್ ಬಗ್ಗೆ ದೂರು ಕೊಟ್ಟಿದ್ದಾರೆ. 2011ರಲ್ಲಿ ಮಾಡಿರಬೇಕು ಅಂದುಕೊಂಡಿದ್ದೆ. ಆದರೆ 2023ರಲ್ಲಿ ಮಾಡಲಾಗಿದೆ ಎಂದು ಹೇಳಿರುವ ಮಾಹಿತಿ ಇದೆ ಎಂದರು. ಗೃಹಸಚಿವರು ಬಿಜೆಪಿ ಮತ್ತು ಕಾಂಗ್ರೆಸ್ ಒಂದೇ ಹೇಳಿದ್ದಾರೆ. ಸಿಜೆಪಿ ಪ್ರತಿಭಟನೆಗೆ ಎಷ್ಟು ಫಂಡ್ ಕೊಡುತ್ತಿದ್ದಾರೆ ಎಂದು ಅವರೇ ಹೇಳಬೇಕು. ನಾನು ಯಾವ ಹುದ್ದೆಯ ಮೇಲೂ ಕಣ್ಣು ಹಾಕಿಲ್ಲ. ನ್ಯಾಯಯುತವಾಗಿ ಕೆಲಸ ಮಾಡಿ ಎಂದಷ್ಟೇ ಹೇಳುತ್ತಿದ್ದೇನೆ. ಅಕ್ರಮ ವ್ಯವಹಾರಗಳಿಗೆ ಅವಕಾಶ ಮಾಡಿಕೊಡಬೇಡಿ. ಗೃಹಸಚಿವರ ತವರು ಜಿಲ್ಲೆ ಕಲಬುರಗಿಯಲ್ಲಿ ಸಿಬ್ಬಂದಿಗಳ ನಕಲಿ ಹೆಸರಿನಲ್ಲಿ ಕೋಟ್ಯಂತರ ಹಣ ಲೂಟಿ ಆಗಿರುವ ಮಾಹಿತಿ ಇದೆ. ಈ ರೀತಿ ಕಾನೂನು ಬಾಹಿರ ವ್ಯವಹಾರ ನಡೆಸುವ ಮೂಲಕ ಅವರು ಪ್ರಮಾಣಪತ್ರ ಪಡೆಯಬಹುದು ಎಂದು ವ್ಯಂಗ್ಯವಾಡಿದರು.

ಹಿರಿಯ ಪೊಲೀಸ್ ಅಧಿಕಾರಿ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ಆರೋಪವಿದ್ದು, ಈ ಬಗ್ಗೆ ಆ ಅಧಿಕಾರಿ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಸರ್ಕಾರ ಪ್ರಾಮಾಣಿಕವಾಗಿದ್ದರೆ ತನಿಖೆಗೆ ಆ ಅಧಿಕಾರಿ ಬೇಡ ಎಂದು ಹೇಳುವುದು ಏಕೆ? ರಾಜ್ಯ ಸರ್ಕಾರದ ಅಧಿಕಾರಿಯನ್ನೇ ಬೇಡ ಎನ್ನುತ್ತಿದ್ದಾರೆ. ಸುಳ್ಳು ಮಾಹಿತಿ ನೀಡುವುದು, ನಕಲಿ ದಾಖಲೆ ವಿಚಾರದಲ್ಲಿ ಪರಿಣಿತರಾಗಿದ್ದಾರೆ ಎಂದು ಟೀಕಿಸಿದರು.

ಕಾಳರಾತ್ರಿ : ಕತ್ತಲೆಯ ಎದೆಯಲ್ಲೇ ಬೆಳಕಿನ ಹುಡುಕಾಟ

# ನವರಾತ್ರಿಯ ಏಳನೇ ದಿನದ ಆರಾಧನೆ ಭಯವನ್ನು ಎದುರಿಸುವ ಧೈರ್ಯ, ಅಜ್ಞಾನವನ್ನು ದೂರಮಾಡುವ ಜ್ಞಾನ ಮತ್ತು ಸಂಕಷ್ಟಗಳನ್ನು ಮೀರಿಸುವ ಆತ್ಮಬಲ

ನವರಾತ್ರಿಯ ಮೊದಲ ಆರು ದಿನಗಳಲ್ಲಿ ದೇವಿಯ ವಿಭಿನ್ನ ಸ್ವರೂಪಗಳನ್ನು ಆರಾಧಿಸುತ್ತಾ ಬಂದ ನಾವು, ಏಳನೇ ದಿನ ಕಾಲರಾತ್ರಿಯ ಸನ್ನಿಧಿಗೆ ತಲುಪುತ್ತೇವೆ. ಹೆಸರಿನಲ್ಲೇ ಭಯವನ್ನು ಹುಟ್ಟಿಸುವ ಈ ದೇವಿಯ ರೂಪದ ಹಿಂದೆ ಅಪಾರ ಕರುಣೆ, ರಕ್ಷಣೆ ಮತ್ತು ಅಭಯದ ಸಂದೇಶ ಅಡಗಿದೆ. ಹೊರನೋಟಕ್ಕೆ ಭಯಾನಕವಾಗಿ ಕಂಡರೂ ಭಕ್ತರಿಗೆ ಶುಭವನ್ನು ಕರುಣಿಸುವವಳು ಕಾಲರಾತ್ರಿ. ಆದ್ದರಿಂದಲೇ ಅವಳನ್ನು ಶುಭಂಕರಿ ಎಂದೂ ಕರೆಯಲಾಗುತ್ತದೆ.

ಕಾಲ ರಾತ್ರಿಯು ಕತ್ತಲೆಯನ್ನು ಎದುರಿಸಲು ಬಂದ ದೇವಿ. ಪೌರಾಣಿಕ ನಂಬಿಕೆಗಳ ಪ್ರಕಾರ, ದುಷ್ಟಶಕ್ತಿಗಳ ಸಂಹಾರಕ್ಕಾಗಿ ದೇವಿಯು ಕಾಲರಾತ್ರಿಯ ಉಗ್ರ ಸ್ವರೂಪವನ್ನು ತಾಳಿದಳು. ಶುಂಭ-ನಿಶುಂಭರಂತಹ ಅಸುರರ ವಿರುದ್ಧದ ಯುದ್ಧದಲ್ಲಿ ಚಾಮುಂಡೆ ಸೇರಿದಂತೆ ದೇವಿಯ ಉಗ್ರ ರೂಪಗಳ ಮಹಿಮೆಯನ್ನು ದೇವೀಮಾಹಾತ್ಮ್ಯ ವಿವರಿಸುತ್ತದೆ. ನವರಾತ್ರಿಯ ಕಾಲರಾತ್ರಿ ಆರಾಧನೆಯು ಈ ದುಷ್ಟಶಕ್ತಿ ಸಂಹಾರದ ಪರಂಪರೆಯೊಂದಿಗೆ ಸಂಬಂಧ ಹೊಂದಿದೆ. ವಿವಿಧ ಪುರಾಣ ಮತ್ತು ಪ್ರಾದೇಶಿಕ ಸಂಪ್ರದಾಯಗಳಲ್ಲಿ ಕಥನಗಳ ವಿವರಗಳು ಭಿನ್ನವಾಗಿರಬಹುದು. ಕಾಲರಾತ್ರಿಯ ರೂಪ ವಿಶಿಷ್ಟವಾದುದು. ಕಪ್ಪು ವರ್ಣದ ದೇಹ, ಬಿಡಿಯಾಗಿ ಹರಡಿದ ಕೂದಲು, ಮಿಂಚಿನಂತೆ ಹೊಳೆಯುವ ಕಣ್ಣುಗಳು, ಕತ್ತೆ ವಾಹನ, ನಾಲ್ಕು ಕೈಗಳು ಇವು ಅವಳನ್ನು ಇತರ ದೇವೀಸ್ವರೂಪಗಳಿಗಿಂತ ವಿಭಿನ್ನವಾಗಿ ತೋರಿಸುತ್ತವೆ. ಒಂದು ಕೈಯಲ್ಲಿ ವಜ್ರಾಯುಧ ಅಥವಾ ಕಬ್ಬಿಣದ ಆಯುಧ, ಮತ್ತೊಂದು ಕೈಯಲ್ಲಿ



ಖಡ್ಗವಿದ್ದು, ಉಳಿದ ಕೈಗಳು ಅಭಯ ಮತ್ತು ವರದ ಮುದ್ರೆಗಳ ಮೂಲಕ ಭಕ್ತರಿಗೆ ಧೈರ್ಯ ಹಾಗೂ ಆಶೀರ್ವಾದವನ್ನು ನೀಡುತ್ತವೆ ಎಂದು ಸಾಮಾನ್ಯವಾಗಿ ಚಿತ್ರಿಸಲಾಗುತ್ತದೆ.

ಈ ರೂಪದ ಸಂದೇಶ ಸ್ಪಷ್ಟವಾಗಿದೆ: ನಿಜವಾದ ಶಕ್ತಿ ಎಂದರೆ ಭಯ ಹುಟ್ಟಿಸುವುದಲ್ಲ; ಭಯದ ಎದುರು ನಿಂತು ರಕ್ಷಿಸುವುದು. ಕತ್ತಲೆ ಎಷ್ಟೇ ದಟ್ಟವಾಗಿದ್ದರೂ ಅದನ್ನು ಎದುರಿಸುವ ಶಕ್ತಿ ನಮ್ಮೊಳಗೆ ಜಾಗೃತವಾದಾಗ ಬೆಳಕಿನ ಹಾದಿ ಕಾಣಿಸತೊಡಗುತ್ತದೆ.

ಏಳನೇ ದಿನದ ಆರಾಧನೆಯ ವಿಶೇಷತೆ

ನವರಾತ್ರಿಯ ಏಳನೇ ದಿನ ಕಾಲರಾತ್ರಿಯನ್ನು ಭಕ್ತಿಯಿಂದ ಪೂಜಿಸಲಾಗುತ್ತದೆ. ಅನೇಕ ಸಂಪ್ರದಾಯಗಳಲ್ಲಿ ರಾತ್ರಿ ಪೂಜೆ, ದೀಪಾರಾಧನೆ, ಮಂತ್ರಜಪ ಮತ್ತು ದೇವಿಯ ಸ್ತುತಿಗೆ ವಿಶೇಷ ಮಹತ್ವವಿದೆ. ಭಕ್ತರು ತಮ್ಮ ಬದುಕಿನ ಭಯ, ಆತಂಕ ಮತ್ತು ಅಡೆತಡೆಗಳನ್ನು ದೂರಮಾಡಿ ಮನಸ್ಸಿಗೆ ಸ್ಥೈರ್ಯ ನೀಡುವಂತೆ ಪ್ರಾರ್ಥಿಸುತ್ತಾರೆ. ಕಾಲರಾತ್ರಿಯ ಆರಾಧನೆಗೆ ನೀಲಿ ಅಥವಾ ಗಾಢ ಬಣ್ಣಗಳನ್ನು ಕೆಲವು ಸಂಪ್ರದಾಯಗಳು ಜೋಡಿಸಿದರೂ, ಪೂಜೆಯ ಬಣ್ಣ ಮತ್ತು ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ದೇವಿಯ ಉಗ್ರ ರೂಪವು ವಿನಾಶವನ್ನೇ ಸೂಚಿಸುವುದಿಲ್ಲ. ಅದು ದುಷ್ಟತನ, ಅಜ್ಞಾನ ಮತ್ತು ಅಹಂಕಾರದ ಅಂತ್ಯವನ್ನು ಸಂಕೇತಿಸುತ್ತದೆ. ನಮ್ಮೊಳಗೆ ನೆಲೆಸಿರುವ ಕೋಪ, ದ್ವೇಷ, ಅಸೂಯೆ, ಅತಿಯಾದ ಭಯ ಮತ್ತು ತಪ್ಪು ನಂಬಿಕೆಗಳನ್ನು ಗುರುತಿಸಿ ಅವುಗಳನ್ನು ಜಯಿಸುವ ಪ್ರಯತ್ನವೂ ಕಾಲರಾತ್ರಿ ಆರಾಧನೆಯ ಒಂದು ಆಂತರಿಕ ಅರ್ಥವಾಗಿದೆ. ನಮ್ಮೊಳಗಿನ ಕತ್ತಲೆಯನ್ನೂ ಎದುರಿಸುವ ಸಂಕಲ್ಪವಾಗಲಿ. ಪ್ರತಿಯೊಬ್ಬರ ಬದುಕಿನಲ್ಲಿಯೂ ಕೆಲವು ಕತ್ತಲೆಯ ಕ್ಷಣಗಳಿರುತ್ತವೆ.ಸೋಲು, ನಿರಾಶೆ, ಅನಿಶ್ಚಿತತೆ, ಆತ್ಮವಿಶ್ವಾಸದ ಕೊರತೆ ಮತ್ತು ಭವಿಷ್ಯದ ಚಿಂತೆ ನಮ್ಮ ಮನಸ್ಸನ್ನು ಆವರಿಸಬಹುದು. ಇಂತಹ ಸಂದರ್ಭಗಳಲ್ಲಿ ಸಮಸ್ಯೆಗಳಿಂದ ಓಡಿಹೋಗುವುದಕ್ಕಿಂತ ಅವುಗಳನ್ನು ಧೈರ್ಯದಿಂದ ಎದುರಿಸುವುದು ಮುಖ್ಯ. ಅಗತ್ಯವಿದ್ದಾಗ ನೆರವು ಕೇಳುವುದು, ತಪ್ಪುಗಳನ್ನು ಒಪ್ಪಿಕೊಂಡು ತಿದ್ದಿಕೊಳ್ಳುವುದು ಮತ್ತು ಮತ್ತೆ ಪ್ರಯತ್ನಿಸುವುದು ಕೂಡ ಶಕ್ತಿಯ ಲಕ್ಷಣಗಳೇ. ಕಾಲರಾತ್ರಿಯ ಸ್ವರೂಪವು ಕಷ್ಟಗಳನ್ನು ನಿರಾಕರಿಸುವುದನ್ನು ಕಲಿಸುವುದಿಲ್ಲ; ಕಷ್ಟಗಳ ನಡುವೆಯೂ ಕುಗ್ಗದೆ ನಿಲ್ಲುವುದನ್ನು ಕಲಿಸುತ್ತದೆ. ಕತ್ತಲೆಯನ್ನು ಶಪಿಸುತ್ತಾ ಕುಳಿತುಕೊಳ್ಳುವುದಕ್ಕಿಂತ ಒಂದು ದೀಪವನ್ನಾದರೂ ಹಚ್ಚುವ ಮನೋಭಾವವನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುತ್ತದೆ. ನಮ್ಮ ಮಾತು, ನಡವಳಿಕೆ ಮತ್ತು ನಿರ್ಧಾರಗಳು ಇನ್ನೊಬ್ಬರ ಬದುಕಿನಲ್ಲಿ ಭರವಸೆಯ ಬೆಳಕಾಗಬಲ್ಲವು ಎಂಬುದನ್ನು ನೆನಪಿಸುತ್ತದೆ.

ಕಾಲರಾತ್ರಿಯ ಆರಾಧನೆಯ ಈ ಪವಿತ್ರ ದಿನದಲ್ಲಿ, ಭಯದ ಕಾರಣಕ್ಕೆ ಅನ್ಯಾಯವನ್ನು ಸಹಿಸುವವರಿಗೂ, ಸತ್ಯವನ್ನು ತಿಳಿದಿದ್ದರೂ ಧ್ವನಿ ಎತ್ತಲು ಹಿಂಜರಿಯುವವರಿಗೂ ಆತ್ಮಾವಲೋಕನ ಅಗತ್ಯ. ದೇವಿಯ ಉಗ್ರರೂಪವನ್ನು ಪೂಜಿಸುತ್ತಾ, ನಿಜಜೀವನದಲ್ಲಿ ದುರ್ಬಲರ ನೋವಿನ ಎದುರು ನಿರ್ಲಕ್ಷ್ಯ ತೋರುವುದು ನಮ್ಮ ಭಕ್ತಿಯ ಅರ್ಥವನ್ನೇ ಪ್ರಶ್ನಿಸುತ್ತದೆ. ಕತ್ತಲೆಯನ್ನು ದೂರಮಾಡುವ ದೇವಿಯನ್ನು ಆರಾಧಿಸುವುದರ ನಿಜವಾದ ಸಾರ್ಥಕತೆ, ನಮ್ಮೊಳಗಿನ ಭಯ ಮತ್ತು ಸಮಾಜದಲ್ಲಿನ ಅನ್ಯಾಯವನ್ನು ಎದುರಿಸಲು ಧೈರ್ಯ ತೋರಿಸುವುದರಲ್ಲಿ ಅಡಗಿದೆ. ತಾಯಿ ಕಾಲರಾತ್ರಿ ನಾಡಿನ ಜನತೆಗೆ ಸದ್ಗತಿಯನ್ನು ಕರುಣಿಸಲಿ.




ಗಿರಿಜಾ I S ಹಿರೇಮಠ
ಶಿಕ್ಷಕಿ, ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಸವಣೂರು.


## ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆ ಗುಣಮಟ್ಟದ ವಿದ್ಯುತ್ ಪೂರೈಸಿ ಹಲಗಿ ಸುರೇಶ



ಹೂವಿನಹಡಗಲಿ: ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಏಳು ಗಂಟೆಗಳ ಗುಣಮಟ್ಟದ ತ್ರಿಫೇಸ್ ವಿದ್ಯುತ್ ಪೂರೈಸಬೇಕು ಹಾಗೂ ರೈತರ ವಿದ್ಯುತ್ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ಒತ್ತಾಯಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ ದೊಡ್ಡಮನಿ ಮಾತನಾಡಿ, ಹೂವಿನಹಡಗಿ ತಾಲೂಕಿನಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದೆ ರೈತರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯುತ್ ವ್ಯತ್ಯಯ ಹಾಗೂ ಅಸಮರ್ಪಕ ಪೂರೈಕೆಯಿಂದ ಬೆಳೆಗಳಿಗೆ ನೀರುಣಿಸಲು ಸಾಧ್ಯವಾಗದೆ ರೈತರು ಆರ್ಥಿಕ ನಷ್ಟದ ಆತಂಕ ಎದುರಿಸುತ್ತಿದ್ದಾರೆ ಎಂದರು.

ಹಗರಿಬೊಮ್ಮನಹಳ್ಳಿ ತಾಲೂಕು ರೈತ ಸಂಘದ ಅಧ್ಯಕ್ಷ ಬಸವನಗೌಡ ಮಾತನಾಡಿ, ರೈತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸೂಕ್ತ ಸ್ಪಂದನೆ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಆರ್‌ಎಸ್ ಪಕ್ಷದ ಚಂದ್ರಶೇಖರ ಮಾತನಾಡಿ, ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆಯಲ್ಲಿ ನಿರಂತರ ಏಳು ಗಂಟೆಗಳ ಗುಣಮಟ್ಟದ ತ್ರಿಫೇಸ್ ವಿದ್ಯುತ್ ಪೂರೈಸಬೇಕು. ಅನಗತ್ಯ ವಿದ್ಯುತ್ ಕಡಿತ ತಡೆದು, ರೈತರಿಗೆ ಅನುಕೂಲವಾಗುವ ವೇಳಾಪಟ್ಟಿಯನ್ನು ಪ್ರಕಟಿಸಿ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಆಗ್ರಹಿಸಿದರು. ರೈತ ಸಂಘದ ಕಾರ್ಯದರ್ಶಿ ಶಿವರಾಜ್ ಮಾತನಾಡಿ, ವಿದ್ಯುತ್ ಪೂರೈಕೆಯಲ್ಲಿನ ತಾಂತ್ರಿಕ ದೋಷಗಳನ್ನು ತ್ವರಿತವಾಗಿ ಸರಿಪಡಿಸಿ, ನಿರಂತರ ಮೇಲ್ವಿಚಾರಣೆ ನಡೆಸಬೇಕು. ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಸರ್ಕಾರ ಹಾಗೂ ಜೆಸ್ಕಾಂ ಅಧಿಕಾರಿಗಳು ತುರ್ತು ಸಭೆ ನಡೆಸಬೇಕು ಎಂದರು. ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಬಾಣದ ಶಿವಣ್ಣ ಮಾತನಾಡಿ, ರೈತರು ದೇಶದ ಅನ್ನದಾತರಾಗಿದ್ದು, ಕೃಷಿಗೆ ಅಗತ್ಯವಾದ ವಿದ್ಯುತ್ ಸಕಾಲದಲ್ಲಿ ದೊರೆಯುವುದು ಅತ್ಯವಶ್ಯಕವಾಗಿದೆ ಎಂದು ಹೇಳಿದರು. ಎಐಟಿಯುಸಿ ಮುಖಂಡ ಹಲಗಿ ಸುರೇಶ ಮಾತನಾಡಿ, ಜೆಸ್ಕಾಂ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ರೈತರ ಟ್ರಾನ್ಸ್‌ಫಾರ್ಮರ್‌ಗಳು (ಟಿಸಿ) ಸುಟ್ಟಾಗ ದುರಸ್ತಿಗಾಗಿ ?30 ಸಾವಿರದಿಂದ ?50 ಸಾವಿರದವರೆಗೆ ಹಣ ವಸೂಲಿ ಮಾಡಲಾಗುತ್ತಿದೆ. ಎಸ್ .ಓ.ಗಳು ಅಕ್ರಂ ಆಸ್ತಿ ಮಾಡುತ್ತಿದ್ದಾರೆ.ಅವರೆ ಗುತ್ತಿಗೆದಾರು ಅವರ ಕುಟುಂಬದವರ ಹೆಸರಿನಲ್ಲಿ ಟೇಂಡರ್ ಹಾಕಿ ರೈತರಿಗೆ ಸರಿಯಾದ ಸಮಯಕ್ಕೆ ಕಾಮಗಾರಿ ಅರೆ ಮಾಡಿ ಬಿಲ್ ಪಾವತಿ ಆಗಿರುತ್ತವೆ. ಎಂಬ ಆರೋಪಗಳಿದ್ದು, ಇಂತವರ ಬಗ್ಗೆ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಬೇಕು. ಹಣ ಪಡೆದು ನಕಲಿ ಆರ್‌ಆರ್ ಸಂಖ್ಯೆ ನೀಡಿರುವ ಉದಾಹರಣೆಗಳೂ ಇವೆ ಎಂದು ಆರೋಪಿಸಿದರು. ರೈತರ ನ್ಯಾಯಯುತ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವಿಠ್ಠಲ್ ನಾಯ್ಕ, ಪಕ್ಕಿರೇಶ ಬೂದನೂರು, ಮಂಜುನಾಥ ಕೊಂಬಳಿ, ಅಂಚೆ ಮಂಜುನಾಥ, ಸುಭಾನ್ ಹುಗಲೂರು, ಮುಜ್ಜು, ಜಂಗ್ಲಿಸಾಬ್, ಇಟಗಿ ರಮೇಶ್ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು ನಂತರ ಸಂಜೆ ಆರು ಗಂಟೆಗೆ ತನಕ ಇಲಾಖೆ ಮುಂಬಾಗದಲ್ಲಿ ಪ್ರತಿಭಟನೆ ನಡೆಸಿದರು ನಂತರ ಸಿಪಿಐ ಮಲ್ಲಪ್ಪ ಹೂಗಾರ ರವರು ರೈತರನ್ನು ಮನವೊಲಿಸಿ ತಾತ್ಕಾಲಿಕ ಹೊರಾಟ ಹಿಂಪಡೆಯಲಾಯಿತು.


ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904


## ನೈಜ ಸಂಬಂಧಗಳ ಭಾವನೆಯ ತ್ರಿಕೋನ ಪ್ರೇಮಕಥೆ ಪ್ರೇಮದ ಊರಲ್ಲಿ

ಮನಮಿಡಿಯುವ ಹಿನ್ನೆಲೆ ಸಂಗೀತ, ದೃಶ್ಯಗಳಿಗೆ ಜೀವ ತುಂಬುವಂತಹ ಹಿನ್ನೆಲೆ ಸಂಗೀತ ಚಿತ್ರದ ಜೀವಾಳವಾಗಿದೆ. ಅಪ್ಪ-ಮಗನ ನಡುವಿನ ಭಾವನಾತ್ಮಕ ಬಂಧ, ಅಣ್ಣ-ತಂಗಿಯ ವಾತ್ಸಲ್ಯ, ತ್ರಿಕೋನ ಪ್ರೇಮಕಥೆ, ಹಳ್ಳಿ ಹುಡುಗರಿಗೆ ಹೆಣ್ಣು ಸಿಗದ ಸಂಕಷ್ಟ ಮತ್ತು ಓದಿಕೊಂಡ ಹುಡುಗಿಯ ವರ್ತನೆಯ ಸುತ್ತ ಹರಡುವ ಹಳ್ಳಿಯ ವದಂತಿಗಳು. ಇವೆಲ್ಲವನ್ನೂ ಯಾವುದೇ ಆಡಂಬರವಿಲ್ಲದೆ ತೆರೆಯ ಮೇಲೆ ತರಲಾಗಿದೆ.

ಯಾವುದೇ ಅಬ್ಬರವಿಲ್ಲದೆ, ಲಾಂಗು-ಮಚ್ಚುಗಳ ರಕ್ತಪಾತವಿಲ್ಲದೆ, ಮನಸ್ಸಿಗೆ ಮುದನೀಡುವ ಸುಂದರ ದೃಶ್ಯಗಳ ಮೂಲಕ ಒಂದು ಸಾಮಾನ್ಯ ಹಳ್ಳಿಯ ಕಥೆಯನ್ನು ಅತ್ಯಂತ ಸುಂದರವಾಗಿ ಹೆಣೆಯಲಾಗಿದೆ. ಇದು 'ಜಗತ್ತಿನ ಬೆಸ್ಟ್ ಸಿನಿಮಾ' ಎನಿಸದಿದ್ದರೂ, ಯಾವುದೇ ಬೇಸರವಿಲ್ಲದೆ ಆರಾಮವಾಗಿ ಕುಳಿತು ನೋಡಿ ಕಣ್ತುಂಬಿಕೊಳ್ಳಬಹುದಾದ ಭಾವನಾತ್ಮಕ ಚಿತ್ರವಾಗಿದೆ. ಈ ಚಿತ್ರದ ಅತಿದೊಡ್ಡ ಹೆಗ್ಗಳಿಕೆ ಏನೆಂದರೆ, ಇದನ್ನು ಗೆಲ್ಲಿಸುತ್ತಿರುವುದು ಸಿನಿಮಾ ತಂತ್ರಜ್ಞರೋ ಅಥವಾ ಗಂಭೀರ ಸಿನಿಮಾ ವಿಮರ್ಶಕರೋ ಅಲ್ಲ! ಬದಲಾಗಿ, ಸಂಜೆ ಮನೆಯಲ್ಲಿ ಕುಳಿತು ಧಾರಾವಾಹಿಗಳನ್ನು



ನೋಡುತ್ತಿದ್ದ ಅಪ್ಪಟ ಕೌಟುಂಬಿಕ ಪ್ರೇಕ್ಷಕರು ಇದು ದಂಡು ದಂಡಾಗಿ ಚಿತ್ರಮಂದಿರಗಳತ್ತ ಮುಖ ಮಾಡಿದ್ದಾರೆ. ರಾತ್ರಿ 10 ಗಂಟೆಯ ಪ್ರದರ್ಶನ ಕೂಡ ಹೌಸ್‌ಫುಲ್ ಆಗುತ್ತಿದೆ ಎಂದರೆ, ನೂರಾರು ಕೋಟಿ ಸುರಿದು ಅಬ್ಬರದ ಸಿನಿಮಾಗಳನ್ನು ಮಾಡಬೇಕೆ ಎಂಬ ಪ್ರಶ್ನೆ ಸಿನಿಮಾ ಪ್ರಿಯರಿಗೆ ಮೂಡುವುದು ಸಹಜ. ಇಂದಿನ ಜನ ಈ ವೇಗದ, ಯಾಂತ್ರಿಕ ಬದುಕಿನ ಓಟದಿಂದ ಬೇಸತ್ತಿದ್ದಾರೆ. ಅವರಿಗೆ ಬೇಕಾಗಿರುವುದು ಮನಸ್ಸಿಗೆ ಶಾಂತಿ, ನೆಮ್ಮದಿ, ಒರಗಿಕೊಳ್ಳಲು ಒಂದು ಆಪ್ತವಾದ ಹೆಗಲು, ಕಣ್ಣೀರು ಒರೆಸುವ ಕೈಗಳು ಮತ್ತು ಸಮಾಧಾನ ನೀಡುವ ನಾಲ್ಕು ಪ್ರೀತಿಯ ಮಾತುಗಳು. ಪ್ರೀತಿಯ ಅಲೆ, ಸ್ನೇಹ, ಮೌಲ್ಯಗಳು, ನಂಬಿಕೆ ಹಾಗೂ ಸನ್ಮಾರ್ಗಗಳ ಹುಡುಕಾಟದಲ್ಲಿದ್ದಾರೆ.

15 ವರ್ಷಗಳ ಹಿಂದೆ ನಾವು ಅನುಭವಿಸುತ್ತಿದ್ದ ಆ ಸರಳ ಜೀವನ ಮೌಲ್ಯಗಳನ್ನು ಜನ ಇಂದು ಸಿನಿಮಾಗಳಲ್ಲಿ ಹುಡುಕುತ್ತಿದ್ದಾರೆ. ನಾವು ಮುಂದೆ ಸಾಗಬೇಕಾದರೆ, ಒಮ್ಮೆ ಆ ಹಿಂದಿನ ಸರಳತೆ, ಆಪ್ತತೆ ಮತ್ತು ಮಾನವೀಯ ಸಂಬಂಧಗಳ ಕಡೆಗೆ ತಿರುಗಿ ನೋಡಿ ನಮ್ಮ ಹೆಜ್ಜೆಗಳನ್ನು ಇಡಬೇಕಿದೆ. 'ಪ್ರೇಮದ ಊರಲಿ' ಅಂತಹ ಒಂದು ಆತ್ಮೀಯ ನೆನಪನ್ನು ಮತ್ತು ಅನುಭವವನ್ನು ಪ್ರೇಕ್ಷಕರಿಗೆ ಉಣಬಡಿಸುತ್ತಿದೆ

ಬಸವರಾಜ ಮರದೂರ

## ಅಥಣಿಯಲ್ಲಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ 95ನೇ ಜಯಂತಿ ಆಚರಣೆ ಕಲಾಂ ಸರ್ಕಲ್‌ನಲ್ಲಿ ಪ್ರತಿಮೆ ಸ್ಥಾಪನೆಗೆ ಗಣ್ಯರ ಒಲವು

ಅಥಣಿ: ಭಾರತ ರತ್ನ, ಮಾಜಿ ರಾಷ್ಟ್ರಪತಿ ಹಾಗೂ ಅಪ್ರತಿಮ ವಿಜ್ಞಾನಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ 95ನೇ ಜಯಂತಿಯನ್ನು ಅಥಣಿ ತಾಲೂಕು ಮೈನಾರಿಟಿ ಸೋಷಿಯಲ್ ಆ?ಯಂಡ್ ವೆಲ್ಫೇರ್ ಕಮ್ಮಿಟಿ ವತಿಯಿಂದ ಅಧ್ಯಕ್ಷ ಆಯಾಜ್ ಮಾಸ್ಟರ್ ಅವರ ಅಧ್ಯಕ್ಷತೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಅಥಣಿ ನಗರದ ಕಲಾಂ ಸರ್ಕಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಮಾಜಸೇವಕರು ಹಾಗೂ ಗಣ್ಯರು ಭಾಗವಹಿಸಿ, ಡಾ. ಕಲಾಂ ಅವರ ದೇಶಸೇವೆ, ವೈಜ್ಞಾನಿಕ ಸಾಧನೆ, ಸರಳ ಜೀವನ ಮತ್ತು ವಿದ್ಯಾರ್ಥಿಗಳ ಮೇಲಿನ ಪ್ರೀತಿಯನ್ನು ಸ್ಮರಿಸಿದರು. ಇದೇ ಸಂದರ್ಭದಲ್ಲಿ ಕಲಾಂ ಸರ್ಕಲ್‌ನಲ್ಲಿ ಅವರ ಪ್ರತಿಮೆ ಸ್ಥಾಪಿಸುವ ಕುರಿತು ಗಣ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಸಿದ್ಧಾರ್ಥ ಶಿಂಗೆ ಮಾತನಾಡಿ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಭಾರತವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿ ರೂಪಿಸುವಲ್ಲಿ ಹಾಗೂ ಕ್ಷಿಪಣಿ ತಂತ್ರಜ್ಞಾನದಲ್ಲಿ ಸ್ವಾವಲಂಬಿಯಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇತಿಹಾಸದಲ್ಲಿ ಟಿಪ್ಪು ಸುಲ್ತಾನ್ ನಂತರ ಭಾರತದ ರಕ್ಷಣಾ ಕ್ಷೇತ್ರವನ್ನು ಬಲಪಡಿಸುವಲ್ಲಿ ಕಲಾಂ ಅವರ ಕೊಡುಗೆ ಸ್ಮರಣೀಯವಾಗಿದೆ ಎಂದರು. ಶ್ರೇಷ್ಠ ವಿಜ್ಞಾನಿಯಾಗಿದ್ದ ಕಲಾಂ ಅವರನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ದೂರದೃಷ್ಟಿಯಿಂದ ರಾಷ್ಟ್ರಪತಿ ಹುದ್ದೆಗೆ ಆಯ್ಕೆ ಮಾಡಿದರು. ಪಕ್ಷಾತೀತವಾಗಿ ಎಲ್ಲರೂ ಅವರನ್ನು ಬೆಂಬಲಿಸಿದ್ದರು. ರಾಷ್ಟ್ರಪತಿಯಾದ ಬಳಿಕವೂ ರಾಷ್ಟ್ರಪತಿ ಭವನದ ಬಾಗಿಲು ವಿದ್ಯಾರ್ಥಿಗಳಿಗಾಗಿ ಸದಾ ತೆರೆದಿತ್ತು. ದೇಶದ ಯಾವುದೇ ಭಾಗಕ್ಕೆ ಹೋದರೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರಲ್ಲಿ ಜ್ಞಾನ ಮತ್ತು ಸಾಧನೆಯ ಹಂಬಲವನ್ನು ಬೆಳೆಸುತ್ತಿದ್ದರು. ಬಾಲ್ಯದಿಂದ ಕೊನೆಯವರೆಗೂ ಮಕ್ಕಳೊಂದಿಗೆ ಬೆರೆತು, ಉತ್ತಮ ಪ್ರಜೆಗಳನ್ನು ರೂಪಿಸುವ ಕನಸು ಕಂಡ ಮಹಾನ್ ವ್ಯಕ್ತಿ ಅವರು. ರಾಷ್ಟ್ರಪತಿಯಾಗಿ ಅವರ ಕೆಲವು ನಿರ್ಧಾರಗಳ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ ವಿಜ್ಞಾನಿಯಾಗಿ ಮತ್ತು ಶಿಕ್ಷಕರಾಗಿ ದೇಶಕ್ಕೆ ನೀಡಿದ ಕೊಡುಗೆಯನ್ನು ಭಾರತ ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಅಥಣಿ ನಗರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್ ಮಾತನಾಡಿ, ಡಾ. ಅಬ್ದುಲ್ ಕಲಾಂ ಅವರು ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಮಹಾನ್ ವ್ಯಕ್ತಿ. ಅವರ ವೈಜ್ಞಾನಿಕ ಸಾಧನೆಗಳು ಭಾರತದ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿವೆ. ಇಂತಹ ಮಹಾನ್ ಚೇತನರ ಪ್ರತಿಮೆಯನ್ನು ಅಥಣಿಯಲ್ಲಿ ಸ್ಥಾಪಿಸುವುದಕ್ಕೆ ತಮ್ಮ ಸಹಮತವಿದೆ ಎಂದರು. ಕಲಾಂ ಅವರ ಪ್ರತಿಮೆ ಸ್ಥಾಪನೆಯ ಕುರಿತು ಮುಂದಿನ ನಗರಸಭೆ ಸಭೆಯಲ್ಲಿ ಚರ್ಚಿಸಿ, ಆದಷ್ಟು ಬೇಗ ಈ ಕಾರ್ಯವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ಗಿರೀಶ ಬೂಟಾಳಿ ಮಾತನಾಡಿ, ಭಾರತ ಕಂಡ ಅಪ್ರತಿಮ ವಿಜ್ಞಾನಿ, ಮಿಸೈಲ್ ಮ್ಯಾನ್ ಹಾಗೂ ಮಾಜಿ ರಾಷ್ಟ್ರಪತಿ ಭಾರತ ರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಪಕ್ಷಾತೀತ ಮತ್ತು ಜಾತ್ಯತೀತ ನಾಯಕರು. ಅವರು ಎಲ್ಲ ಧರ್ಮ, ಜಾತಿ ಹಾಗೂ ಸಮುದಾಯಗಳ ಜನರಿಗೆ ಆದರ್ಶವಾಗಿದ್ದಾರೆ ಎಂದರು. ಭಾರತದ 11ನೇ ರಾಷ್ಟ್ರಪತಿಯಾಗಿ ಐದು ವರ್ಷ ಸೇವೆ ಸಲ್ಲಿಸಿದ ಕಲಾಂ ಅವರು, ಅತ್ಯುನ್ನತ ಹುದ್ದೆಯಲ್ಲಿದ್ದರೂ ಸರಳ ಜೀವನ ನಡೆಸಿದ ಅಪರೂಪದ ವ್ಯಕ್ತಿ. ಪತ್ರಿಕೆ ಹಂಚುವ ಮೂಲಕ ತಮ್ಮ ಜೀವನವನ್ನು ಆರಂಭಿಸಿ, ಏರೋನಾಟಿಕಲ್ ಇಂಜಿನಿಯರ್ ಆಗಿ, ಇಸ್ರೋ ಮತ್ತು ಡಿಆರ್‌ಡಿಒ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ದೇಶದ ಮಿಸೈಲ್ ಮ್ಯಾನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪೋಖ್ರಾನ್ ಅಣುಪರೀಕ್ಷೆಯಲ್ಲಿಯೂ ಮಹತ್ವದ ಪಾತ್ರ ವಹಿಸಿದ್ದರು ಎಂದು ಹೇಳಿದರು. ಪೈಲಟ್ ಆಗಬೇಕೆಂಬ ಕನಸು ನನಸಾಗದಿದ್ದರೂ ನಿರಾಶರಾಗದೆ ದೇಶದ ವಿಜ್ಞಾನ ಮತ್ತು ರಕ್ಷಣಾ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಜೀವನವನ್ನು ಸಮರ್ಪಿಸಿದರು. ಮಕ್ಕಳನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಅವರು, ಕೊನೆಯ



ಕ್ಷಣದವರೆಗೂ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದರು. ಶಿಲ್ಲಾಂಗ್‌ನಲ್ಲಿ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುತ್ತಿದ್ದಾಗಲೇ ಕುಸಿದು ಬಿದ್ದು ಕೊನೆಯುಸಿರೆಳೆದದ್ದು ಅವರ ಜ್ಞಾನಸೇವೆಗೆ ಸಾಕ್ಷಿಯಾಗಿದೆ. ಕಲಾಂ ಸರ್ಕಲ್‌ನಲ್ಲಿ ಅವರ ಜಯಂತಿಯನ್ನು ಎಲ್ಲ ಸಮುದಾಯದವರು ಒಗ್ಗಟ್ಟಿನಿಂದ ಆಚರಿಸಿರುವುದು ಸಂತೋಷದ ಸಂಗತಿ. ಅವರಲ್ಲಿದ್ದ ಮಾನವೀಯತೆ, ಬಡವರ ಬಗೆಗಿನ ಕಾಳಜಿ ಮತ್ತು ಮಕ್ಕಳ ಮೇಲಿನ ಪ್ರೀತಿಯನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ನ್ಯಾಯವಾದಿ ಮಿತೇಶ ಪಟ್ಟಣ ಮಾತನಾಡಿ, ಅಬ್ದುಲ್ ಕಲಾಂ ಅವರು ಕೇವಲ ಒಬ್ಬ ವ್ಯಕ್ತಿಯಲ್ಲ, ಅವರ ಹಿಂದೆ ಒಂದು ದೊಡ್ಡ ಶಕ್ತಿಯಿದೆ. ರಾಷ್ಟ್ರಪತಿಯಾಗಿ ಅವರು ಎಲ್ಲ ಧರ್ಮದ ಜನರನ್ನು ಸಮಾನವಾಗಿ ಕಂಡು, ದೇಶದ ಏಕತೆ ಮತ್ತು ಸೌಹಾರ್ದತೆಗೆ ಮಾದರಿಯಾಗಿದ್ದರು ಎಂದರು. ಪ್ರತಿ ವರ್ಷ ಇಲ್ಲಿ ಕಲಾಂ ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಮುಂದಿನ ವರ್ಷ ಜಯಂತಿ ಆಚರಿಸುವ ವೇಳೆಗೆ ಇದೇ ಸ್ಥಳದಲ್ಲಿ ಅವರ ಪ್ರತಿಮೆ ಸ್ಥಾಪನೆಯಾಗಬೇಕು ಎಂಬುದು ತಮ್ಮ ಆಶಯವಾಗಿದೆ. ಈ ಕಾರ್ಯಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರತಿಮೆ ಸ್ಥಾಪನೆಗಾಗಿ ತಮ್ಮ ಕಡೆಯಿಂದ ಮೊದಲ ದೇಣಿಗೆಯಾಗಿ 5,001 ನೀಡುವುದಾಗಿ ಘೋಷಿಸಿದರು. ಯಶಸ್ವಿ ಹಾಗೂ ಸೂಪರ್ ಸ್ಟಾರ್ ರೈತ ಪುರಸ್ಕಾರ ಪುರಸ್ಕೃತ ಮೈನುದ್ದೀನ್ ಡೊಂಗರಗಾಂವ ಅವರು ಮಾತನಾಡಿ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜೀವನ, ಸಾಧನೆ ಮತ್ತು ದೇಶದ ಅಭಿವೃದ್ಧಿಗೆ ನೀಡಿದ ಕೊಡುಗೆ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಆಯಾಜ್ ಮಾಸ್ಟರ್ ಅವರಿಂದ ವಂದನಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಯಾಜ್ ಮಾಸ್ಟರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು, ಮುಖಂಡರು ಹಾಗೂ ಸಾರ್ವಜನಿಕರಿಗೆ ಕೃತಜ್ಞತೆ ಸಲ್ಲಿಸಿ ವಂದನಾರ್ಪಣೆ ಮಾಡಿದರು.

ಅಜಹರ್ ಮುಲ್ಲಾ ಸ್ವಾಗತಿಸಿ ನಿರೂಪಿಸಿದರು. ಈ ಸಂದರ್ಭದಲ್ಲಿ ರಿಯಾಜ್ ಸನದಿ, ಮಲ್ಲಿಕಾರ್ಜುನ ಬೂಟಾಳಿ, ಸಂತೋಷ ಸಾವಡಕರ,ಪ್ರಮೋದ ಬಿಳ್ಳೂರ, ಆಬಿದ್ ಮಾಸ್ಟರ್, ಸಯ್ಯದ್ ಗಡ್ಡೇಕರ್, ಶಕೀಲ್ ಹೆರ್ವಾಡೆ, ಬಾಬು ಖೇಮಲಾಪುರ, ಆರಿಫ್ ಮೊಮಿನ್, ಅಣ್ಣಾಸಾಬ್ ತೆಲಸಂಗ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಕಾವೇರಿ ತೀರ್ಥೋದ್ಭವಕ್ಕೆ ಕ್ಷಣಗಣನೆ, ಭರದಿಂದ ಸಾಗಿದೆ ಸಿದ್ಧತೆ

ಮಡಿಕೇರಿ: ಕನ್ನಡನಾಡಿನ ಜೀವನದಿ ಎಂದೇ ಹೆಸರುವಾಸಿಯಾಗಿರುವ ಪವಿತ್ರ ಕಾವೇರಿ ಮಾತೆಯ ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ತಲಕಾವೇರಿಯಲ್ಲಿ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ. ಪವಿತ್ರ ಕಾವೇರಿ ತೀರ್ಥರೂಪಿಣಿಯಾಗಿ ಕೊಡಗು ಜಿಲ್ಲೆಯ ಬ್ರಹಗಿರಿ ಬೆಟ್ಟದ ತಪ್ಪಲಿನಲ್ಲಿರುವ ತಲಕಾವೇರಿಯಲ್ಲಿ ಇಂದು ಸಂಜೆ 7.50ಕ್ಕೆ ಸಲ್ಲುವ ಮೇಷ ಲಗ್ನದಲ್ಲಿ ಪವಿತ್ರ ತೀರ್ಥೋದ್ಭವವಾಗಲಿದೆ.



ಈ ಪುಣ್ಯ ಕ್ಷಣವನ್ನು ಕಣ್ತುಂಬಿಕೊಳ್ಳಲು ರಾಜ್ಯ ಹಾಗೂ ಹೊರರಾಜ್ಯಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಈಗಾಗಲೇ ತಲಕಾವೇರಿಗೆ ಆಗಮಿಸಿದ್ದು, ಭಕ್ತರ ಅನುಕೂಲಕ್ಕಾಗಿ ಜಿಲ್ಲಾಡಳಿತ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲಿ ವಿವಿಧ ಅಲಂಕಾರ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದು, ಕುಡಿಯುವ ನೀರು, ವಿಶೇಷ ಬಸ್ ಸೌಲಭ್ಯ, ಪಾರ್ಕಿಂಗ್, ಆಸನದ ವ್ಯವಸ್ಥೆ ಸೇರಿದಂತೆ ಮತ್ತಿತರ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿದೆ. ಕಾವೇರಿ ಕುಂಡಿಕೆಯ ಬಳಿ ಒಂಭತ್ತು ಅರ್ಚಕರು ವಿವಿಧ ಪೂಜಾ ಕೈಂಕರ್ಯಗಳನ್ನು ಮುಂಜಾನೆಯಿಂದಲೇ ನೆರವೇರಿಸಿದ್ದು, ಸಂಜೆಯ ಕಾರ್ಯಕ್ರಮಕ್ಕೆ ತಲಕಾವೇರಿಯ ಬ್ರಹ ಕುಂಡಿಕೆ, ಅಗಸ್ತ್ಯೇಶ್ವರ ಹಾಗೂ ಭಾಗಮಂಡಲದ ದೇವಾಲಯದಲ್ಲೂ ಸಹ ಸಿದ್ಧತೆಗಳನ್ನು ಮಾಡಿಕೊಂಡಿದ್ದು ವಿದ್ಯುತ್ ದೀಪಲಂಕಾರ ಹಾಗೂ ವಿವಿಧ ಬಗೆಯ ಹೂಗಳಿಂದ ಶೃಂಗಾರ ಮಾಡಲಾಗಿದೆ. ತೀರ್ಥೋದ್ಭವದ ನಂತರ ಭಕ್ತ–ರಿಗೆ ತೀರ್ಥ ಪಡೆಯಲು ವ್ಯವಸ್ಥೆ ಮಾಡಲಾಗಿದ್ದು, ರಾತ್ರಿ ವೇಳೆಯಲ್ಲೂ ಸಹ ಅನುಕೂಲವಾಗುವಂತೆ ಹಾಗೂ ಪವಿತ್ರ ಕ್ಷಣವನ್ನು ಕಣ್ತುಂಬಿಕೊಳ್ಳಲು ಬೃಹತ್ ಎಲ್‌ಇಡಿ ವ್ಯವಸ್ಥೆ ಮಾಡಲಾಗಿದೆ.ಜನಪ್ರತಿನಿಧಿಗಳು, ಅಧಿಕಾ–ರಿಗಳು, ಗಣ್ಯರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಲಿದ್ದು, ಪವಿತ್ರ ಕಾವೇರಿ ತೀರ್ಥೋದ್ಭವವನ್ನು ಕಣ್ತುಂಬಿಕೊಳ್ಳಲು ಕಾತುರದಿಂದ ಕಾಯುತ್ತಿದ್ದಾರೆ.

## ‘ಸ್ಟಿಂಗ್ ಆಪರೇಷನ್’ಗೆ ಖರ್ಚಾಗಿರುವ ಹಣದ ಕುರಿತು ತನಿಖೆಯಾಗಬೇಕು : ಹೆಚ್ಡಿಕೆ

ರಾಮನಗರ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಸ್ಟಿಂಗ್ ಆಪರೇಷನ್ ಮಾಡುವುದಕ್ಕೆ ಅಪಾರ ಪ್ರಮಾಣದ ಹಣ ಖರ್ಚಾಗಿದ್ದು, ಜಾರಿ ನಿರ್ದೇಶನಾಲಯ ಮತ್ತು ತೆರಿಗೆ ಇಲಾಖೆ ತನಿಖೆ ನಡೆಸಬೇಕು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.



ಬಿಡದಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ರಾಜ್ಯದಲ್ಲಿ ಸ್ಟಿಂಗ್ ಅಪರೇಷನ್ ದೊಡ್ಡದಾಗಿ ಸದ್ದು ಮಾಡುತ್ತಿದೆ. ಸ್ಟಿಂಗ್ ಮಾಡಲು 10ರಿಂದ 15 ಕೋಟಿ ರೂ.ಖರ್ಚು ಮಾಡಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಅಗತ್ಯವಿದೆ ಎಂದರು. ನೀವು ಕೇವಲ ಹಣದ ಬಗ್ಗೆ ಯಾಕೆ ಲೆಕ್ಕ ಹಾಕುತ್ತಿರಾ? ಅದೆಲ್ಲ ಹೊರಗೆ ಬಂದರೆ ನಮ್ಮ ರಾಜ್ಯದ ಮಾನ ಮಾರ್ಯಾದೆ ಮೂರು ಕಾಸಿಗೂ ಇರಲ್ಲ. ಇವತ್ತು ಆ ರೀತಿಯ ವಾತಾವರಣ ನಿರ್ಮಾಣ ಆಗಿದೆ. 15 ಕೋಟಿ ರೂ. ಗಿಂತಲೂ ಹೆಚ್ಚಿನ ವ್ಯವಹಾರ ನಡೆದಿದೆ. ಇಡಿ ಏನಾದರೂ ಪ್ರವೇಶವಾದರೆ ಸತ್ಯ ಹೊರಗೆ ಬರುತ್ತದೆ. ಹಣಕಾಸು ಹೇಗೆಲ್ಲ ಹರಿದಾಡಿದೆ ಎಂಬ ಮಾಹಿತಿ ಸಿಗುತ್ತದೆ ಎಂದು ಅವರು ತಿಳಿಸಿದರು.

## ಸಾಲುಸಾಲು ರಜೆ : ಊರುಗಳತ್ತ ಹೊರಟ ಜನ, ಬೆಂಗಳೂರಲ್ಲಿ ಭಾರಿ ಟ್ರಾಫಿಕ್ ಜಾಮ್



ಬೆಂಗಳೂರು: ವಾರಾಂತ್ಯ ಹಾಗೂ ದಸರಾದ ಸಾಲುಸಾಲು ರಜೆಯ ಹಿನ್ನಲೆಯಲ್ಲಿ ಊರಿನತ್ತ ತೆರಳಲು ಜನರು ಬಸ್ ನಿಲ್ದಾಣಗಳಿಗೆ ಬರುತ್ತಿದ್ದು, ಎಲ್ಲೆಲ್ಲೂ ಜನವೋ ಜನ, ಟ್ರಾಫಿಕ್ಕೋ ಟ್ರಾಫಿಕ್ಕು.

ದಸರಾ ಹಬ್ಬದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಜನರು ತಮತಮ ಊರುಗಳತ್ತ ಪ್ರಯಾಣ ಬೆಳೆಸಿದ್ದು, ರಾತ್ರಿಯೇ ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣಕ್ಕೆ ಸಾವಿರಾರು ಸಂಖ್ಯೆಯಲ್ಲಿ ಪ್ರಯಾಣಿಕರು ಆಗಮಿಸಿದ್ದು, ಮಳೆಯಿಂದ ಸಂಚಾರದಟ್ಟಣೆ ಉಂಟಾಗಿ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ಘಂಟೆಗಟ್ಟಲೆ ಕಾದುಕಾದು ಹೈರಾಣರಾದ ದೃಶ್ಯ ಮೆಜೆಸ್ಟಿಕ್ ಸುತ್ತಮುತ್ತ ಕಂಡುಬಂದಿತು. ಸಾಮಾನ್ಯ ದಿನಗಳಲ್ಲೇ ಕೆಂಪೇಗೌಡ ಬಸ್ ನಿಲ್ದಾಣದ ಸುತ್ತಮುತ್ತ ಸಂಚಾರದಟ್ಟಣೆ ಇರುತ್ತದೆ. ಇನ್ನು ಹಬ್ಬದ ಸಂದರ್ಭಗಳಲ್ಲಿ ಕೇಳುವುದೇ ಬೇಡ.. ಕಿಲೋಮೀಟ–ರ್‌ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.ಮೆಜೆಸ್ಟಿಕ್, ಮಲ್ಲೇಶ್ವರಂ, ರಾಜಾಜಿನಗರ, ಪೀಣ್ಯ, ಮೈಸೂರು ರಸ್ತೆ, ಬಳ್ಳಾರಿ ರಸ್ತೆ, ಹೆಬ್ಬಾಳ, ಯಶವಂತಪುರ, ಗೊರಗುಂಟೆಪಾಳ್ಯ, ಆನೇಕಲ್ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಂಚಾರದಟ್ಟಣೆ ಕಂಡುಬಂದಿತು. ಇಂದು ಮುಂಜಾನೆಯೂ ಸಹ ಬಸ್ ನಿಲ್ದಾಣಗಳಿಗೆ ಪ್ರಯಾಣಿಕರು ಬಂದಿದ್ದು, ತಾ ಮುಂದು ನಾ ಮುಂದು ಎಂಬಂತೆ ಸೀಟು ಹಿಡಿಯಲು ಮುಂದಾಗಿದ್ದ ದೃಶ್ಯಗಳು ಮೆಜೆಸ್ಟಿಕ್‌ನಲ್ಲಿ ಕಂಡುಬಂದವು. ಹಬ್ಬದ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಒದಗಿಸಿದ್ದರೂ ಸಹ ಪ್ರಯಾಣಿಕರ ಸಂಖ್ಯೆ ಮಾತ್ರ ಕಡಿಮೆ ಇರಲಿಲ್ಲ. ಸಾರಿಗೆ ಬಸ್‌ಗಳ ಜೊತೆಗೆ ಖಾಸಗಿ ಬಸ್‌ಗಳಲ್ಲೂ ಮುಂಗಡ ಬುಕ್ಕಿಂಗ್ ಮಾಡಿಕೊಂಡಿದ್ದ ಜನರು ಬಸ್‌ಗಳನ್ನಿಡಿದು ತೆರಳುತ್ತಿದ್ದರು. ಸಂಚಾರಿ ಪೊಲೀಸರು ಸಂಚಾರದಟ್ಟಣೆ ನಿಯಂತ್ರಿಸಲು ಹರಸಾಹಸ ಪಡಬೇಕಾಯಿತು. ಸರ್ಕಾರಿ, ಖಾಸಗಿ ಕಚೇರಿ ಹಾಗೂ ಕೈಗಾರಿಕೆಗಳಲ್ಲಿ ಇಂದು ಪೂಜೆ ಸಲ್ಲಿಸಿದ್ದು, ಪೂಜೆ ಮುಗಿಸಿಕೊಂಡು ಉದ್ಯೋಗಿಗಳು ಇಂದು ಮಧ್ಯಾಹ್ನದಿಂದಲೇ ಸಾಲುಸಾಲು ರಜೆ ಹಾಕಿ ಊರುಗಳತ್ತ ತೆರಳಿದರು.

**ಟೋಲ್‌ಗಳಲ್ಲೂ ಜಾಮ್ ಜಾಮ್ :**

ತುಮಕೂರು ರಸ್ತೆಯ ಎಂಟನೇ ಮೈಲಿ ಟೋಲ್, ಮಾದಾವರ, ನೆಲಮಂಗಲ, ನೈಸ್ ರಸ್ತೆ, ಏರ್‌ಪೋರ್ಟ್ ರಸ್ತೆ, ಮೈಸೂರು ರಸ್ತೆಯ ಟೋಲ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿ–ದ್ದವು.

# ರಾಜಸ್ಥಾನದಲ್ಲಿ ಭೀಕರ ರಸ್ತೆ ಬಸ್ ಅಪಘಾತ : 8 ಮಂದಿ ಸಾವು, 15 ಜನರಿಗೆ ಗಾಯ

ಕೋಟಾ: ರಾಜಸ್ಥಾನದ ಕೋಟಾ ಜಿಲ್ಲೆಯಲ್ಲಿ ಇಂದು ಬೆಳಿಗ್ಗೆ ಸುಮಾರು 6 ಗಂಟೆಗೆ ದೆಹಲಿ?ಮುಂಬೈ ಎಕ್ಸ್‌ಪ್ರೆಸ್‌ವೇಯಲ್ಲಿ ಸುಮಾರು 23 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಮಿನಿ ಬಸ್ ಚಾಲಕನ ನಿಯಂತ್ರಣ ತಪ್ಪಿ, ರಸ್ತೆಯ ಪಕ್ಕದಲ್ಲಿದ್ದ 15 ಅಡಿ ಆಳದ ಚರಂಡಿಗೆ ಬಿದ್ದ ಪರಿಣಾಮ ಎಂಟು ಮಂದಿ ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ.

ಗಾಯಗೊಂಡವರ ಪೈಕಿ ಎಂಟು ಮಂದಿಯ ಸ್ಥಿತಿ ಗಂಭೀರವಾಗಿದೆ. ಎಕ್ಸ್‌ಪ್ರೆಸ್‌ವೇಯ 384ನೇ ಕಂಬದ ಬಳಿ ಈ ಅಪಘಾತ ಸಂಭವಿಸಿದೆ. ವಾಹನ ಚಲಾಯಿಸುತ್ತಿದ್ದಾಗ ಚಾಲಕನಿಗೆ ನಿದ್ದೆ ಬಂದಿರಬಹುದು ಅಥವಾ ತೂಕಡಿಕೆ ಉಂಟಾಗಿರಬಹುದು. ಇದರಿಂದಾಗಿ ಎಂಟು ಪಥಗಳ ರಸ್ತೆಯಲ್ಲಿ ವಾಹನ ನಿಯಂತ್ರಣ ತಪ್ಪಿ ಪಕ್ಕಕ್ಕೆ ಸರಿದಿರಬಹುದು ಎಂದು ಅಧಿಕಾ–ರಿಗಳು ಶಂಕಿಸಿದ್ದಾರೆ. ಘಟನೆ ನಡೆದ ಕೂಡಲೇ ತುರ್ತು ಸೇವಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಚರಂಡಿಯಲ್ಲಿದ್ದ ಕೆಸರು ಮತ್ತು ನೀರು ರಕ್ಷಣಾ ಕಾರ್ಯಕ್ಕೆ ಅಡ್ಡಿಯುಂಟುಮಾಡಿದ ಹಿನ್ನೆಲೆಯಲ್ಲಿ, ಕ್ರೇನ್‌ಗಳನ್ನು ಬಳಸಿ ಜಖಂಗೊಂಡ ವಾಹನವನ್ನು ಹೊರತೆಗೆಯಲಾಯಿತು ಮತ್ತು ಅದರೊಳಗೆ ಸಿಲುಕಿದ್ದವರನ್ನು ರಕ್ಷಿಸಲಾಯಿತು. ಮಧ್ಯಪ್ರದೇಶದ ಭೋಪಾಲ್ ಮತ್ತು ಬೆತುಲ್ ಜಿಲ್ಲೆಗಳಿಗೆ ಸೇರಿದ ಒಂದೇ ಕುಟುಂಬದ



ಸಂಬಂಧಿಕರು ಇದರಲ್ಲಿ ಪ್ರಯಾಣಿಸುತ್ತಿದ್ದರು ಎಂದು ಕೋಟಾ ಗ್ರಾಮಾಂತರ ಪೊಲೀಸ್ ವ–ರಿಷ್ಠಾಧಿಕಾರಿ (ಎಸ್‌ಪಿ) ಸುಜೀತ್ ಶಂಕರ್ ತಿಳಿಸಿದ್ದಾರೆ. ರಾಜಸ್ಥಾನದಲ್ಲಿ ನಾಲ್ಕರಿಂದ ಐದು ದಿನಗಳ ತೀರ್ಥಯಾತ್ರೆ ಕೈಗೊಳ್ಳಲು ಅವರು ನಿನ್ನೆ ಸಂಜೆ ಭೋಪಾಲ್‌ನಿಂದ ಪ್ರಯಾಣ ಆರಂಭಿಸಿದ್ದರು ಎಂದು ಅವರು ಹೇಳಿದರು.

ಗಾಯಗೊಂಡ ಪ್ರಯಾಣಿಕರಲ್ಲೊಬ್ಬರಾದ ಅಂಶಿಕಾ ಅವರು, ತಾವು ಚಿಕ್ಕಪ್ಪಂದಿರು, ಅತ್ತೆಯಂದಿರು ಮತ್ತು ಇತರ ಸಂಬಂಧಿಕರೊಂದಿಗೆ ಪ್ರಯಾಣಿಸುತ್ತಿದ್ದುದಾಗಿ ತಿಳಿಸಿದರು. ಸಂಜೆ 7 ಗಂಟೆಗೆ ಭೋಪಾಲ್‌ನಿಂದ ಹೊರಟಿದ್ದ ತಾವು ಖಾತು ಶ್ಯಾಮ್‌ಜಿ ದೇವಾಲಯಕ್ಕೆ ದರ್ಶನಕ್ಕಾಗಿ ತೆರಳುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ಅವರು ಹೇಳಿದರು. ವಾಹನದಲ್ಲಿ ಸುಮಾರು 23 ಪ್ರಯಾಣಿಕರಿದ್ದರು. ಅಪಘಾತ ಸಂಭವಿಸಿದಾಗ ಅವರಲ್ಲಿ ಬಹುತೇಕರು ನಿದ್ರಿಸುತ್ತಿದ್ದರು ಎಂದು ಅಂಶಿಕಾ ತಿಳಿಸಿದರು. ಚಾಲಕನಿಗೆ ನಿದ್ದೆ ಬಂದಿರಬಹುದು ಎಂದು ಅವರು ಅಭಿಪ್ರಾಯಪಟ್ಟರು. ಗಾಯಗೊಂಡವರನ್ನು ತಕ್ಷಣವೇ ನ್ಯೂ ಮೆಡಿಕಲ್ ಕಾಲೇಜು ಆಸ್ಪತ್ರೆ ಮತ್ತು ಎಂಬಿಎಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಎನ್‌ಎಂಸಿಎಚ್ ಪ್ರಾಂಶುಪಾಲ ಡಾ. ನಿಲೇಶ್ ಜೈನ್ ಮಾತನಾಡಿ, ಗಾಯಾಳುಗಳಿಗೆ ತಕ್ಷಣವೇ ಚಿಕಿತ್ಸೆ ಆರಂಭಿಸಲಾಗಿದ್ದು, ಸಿಟಿ ಸ್ಕ್ಯಾನ್‌ನಂತಹ ಅಗತ್ಯ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಎನ್‌ಎಂಸಿಎಚ್‌ನ ಸೂಪರ್ ಸ್ಪೆಷಾಲಿಟಿ ಬ್ಲಾಕ್ ಆಸ್ಪತ್ರೆಯ ಅಧೀಕ್ಷಕ ಡಾ. ಅಶುತೋಷ್ ಶರ್ಮಾ ಅವರು, ತಮ್ಮ ಆಸ್ಪತ್ರೆಗೆ 15 ರೋಗಿಗಳನ್ನು ಕರೆತರಲಾಗಿದೆ ಎಂದು ದೃಢಪಡಿಸಿದರು. ಇವರಲ್ಲಿ ಏಳು ಮಂದಿ ಆಸ್ಪತ್ರೆಗೆ ತಲುಪುವಷ್ಟರಲ್ಲಿ ಮೃತಪಟ್ಟಿದ್ದರು. ಗಾಯಗೊಂಡಿದ್ದ ಉಳಿದ ಎಂಟು ಮಂದಿಗೆ ತಕ್ಷಣವೇ ಪ್ರಥಮ ಚಿಕಿತ್ಸೆ ನೀಡಿ, ಆರೋಗ್ಯ ಸ್ಥಿರಗೊಳಿಸಿದ ಬಳಿಕ ಸಮಗ್ರ ವೈದ್ಯಕೀಯ ಆರೈಕೆ ಒದಗಿಸಲಾಗುತ್ತಿದೆ ಎಂದು ಅವರು ಹೇಳಿದರು. ಈ ದುರ್ಘಟನೆಯಲ್ಲಿ ಎಂಟು ಮಂದಿ ಪ್ರಾಣ ಕಳೆದುಕೊಂಡಿದ್ದು, ಉಳಿದ ಪ್ರಯಾಣಿಕರಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಎಸ್‌ಪಿ ಸುಜೀತ್ ಶಂಕರ್ ತಿಳಿಸಿದರು. ಅಧಿಕಾ–ರಿಗಳು ಸ್ಥಳವನ್ನು ತೆರವುಗೊಳಿಸುವ ಕಾರ್ಯವನ್ನು ಮುಂದುವರಿಸಿದ್ದು, ಪ್ರಯಾಣಿಕರ ವಿವರಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಅವರು ಹೇಳಿದರು.

# ಸಿಇಸಿ ಗ್ಯಾನೇಶ್ ಕುಮಾರ್ ವಿರುದ್ಧದ ಶಾಂತಿಯುತ ಹೋರಾಟ ಮುಂದುವರೆಯುತ್ತೆ ; ‘ಕಾಕ್ರೋಚ್ ಪ್ರಕಾಶ್ ರಾಜ್’

ತಿರುವನಂತಪುರಂ: ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಗ್ಯಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ದೇಶಾದ್ಯಂತ ನಡೆಯುತ್ತಿರುವ ಶಾಂತಿಯುತ ಪ್ರತಿಭಟನೆಗಳನ್ನು ದಮನಿಸಲು ಪ್ರಯತ್ನಿಸಿದರೂ, ಹೋರಾಟ ಮುಂದುವ–ರಿಯಲಿದೆ ಎಂದು ನಟ ಹಾಗೂ ಕಾರ್ಯಕರ್ತ ಪ್ರಕಾಶ್ ರಾಜ್ ಹೇಳಿದ್ದಾರೆ.

ಇಲ್ಲಿನ ಮಾನವೀಯಂ ವೀಧಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ವಿರುದ್ಧ ನಡೆದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಕಾರ್ಯಕ್ರಮ ಆರಂಭವಾಗುವ ಮುನ್ನ ಮೈಕ್ರೊಫೋನ್ ಬಳಸಲು ಆಯೋಜ–ಕರು ಅನುಮತಿ ಪಡೆದಿಲ್ಲ ಎಂದು ಹೇಳಿ



ಪೊಲೀಸರು ಮಧ್ಯಪ್ರವೇಶಿಸಿದರು. ಇದ–ರಿಂದ ಸಣ್ಣ ಪ್ರಮಾಣದ ವಾಗ್ವಾದ ಮತ್ತು ತಳ್ಳಾಟ ನಡೆಯಿತು. ಬಳಿಕ ಪೊಲೀಸರು ಕಾರ್ಯಕ್ರಮ ಮುಂದುವರಿಸಲು ಅವಕಾಶ ನೀಡಿದರು. ಮಹಾತ್ಮ ಗಾಂಧಿ, ಬಿ.ಆರ್. ಅಂಬೇಡ್ಕರ್ ಮತ್ತು ಭಗತ್ ಸಿಂಗ್ ಅವರಿಂದ ಸ್ಫೂರ್ತಿ ಪಡೆದು ದೇಶದ ಯುವಜನರು ಶಾಂತಿಯುತವಾಗಿ ಪ್ರತಿಭಟಿಸುವುದನ್ನು ಮುಂದುವರಿಸಲಿದ್ದಾರೆ ಎಂದು ಪ್ರಕಾಶ್ ರಾಜ್ ಹೇಳಿದರು.

“ನಮ್ಮಲ್ಲಿ ಗಾಂಧಿಯವರ ರಕ್ತವಿದೆ, ಅಂಬೇಡ್ಕರ್ ಅವರ ರಕ್ತವಿದೆ, ಭಗತ್ ಸಿಂಗ್ ಅವರ ರಕ್ತವಿದೆ. ನಾವು ಹೋರಾಟ ಮುಂದುವರಿಸುತ್ತೇವೆ ಮತ್ತು ದೇಶಾದ್ಯಂತ ಶಾಂತಿಯುತವಾಗಿ ಪ್ರತಿಭಟಿಸುತ್ತೇವೆ. ಈ ಸರ್ವಾಧಿಕಾರಿ ಧೋರಣೆಯೊಂದಿಗೆ ನೀವು ಸುಲಭವಾಗಿ ಪಾರಾಗಬಹುದು ಎಂದುಕೊಂಡಿದ್ದರೆ, ಅದು ತಪ್ಪು ಎಂಬುದನ್ನು ನಾವು ಸಾಬೀತುಪಡಿಸುತ್ತೇವೆ” ಎಂದು ಅವರು ಹೇಳಿದರು. ಪ್ರತಿಭಟನೆಗಳ ಮೇಲಿನ ನಿರ್ಬಂಧಗಳ ಕುರಿತು ಸಿಇಸಿ ಅವರನ್ನು ಪ್ರಶ್ನಿಸಿದ ಪ್ರಕಾಶ್ ರಾಜ್, “ನಾವು ಪ್ರಶ್ನೆಗಳನ್ನು ಕೇಳುತ್ತಿದ್ದೇವೆ. ಗ್ಯಾನೇಶ್ ಕುಮಾರ್ ಅವರೇ, ನಮ್ಮನ್ನು ಏಕೆ ತಡೆಯುತ್ತಿದ್ದೀರಿ? ನೀವು ನಮ್ಮನ್ನು ತಡೆಯುತ್ತಿದ್ದೀರಿ ಮತ್ತು ಅಕ್ರಮವಾಗಿ ವಶಕ್ಕೆ ಪಡೆಯುತ್ತಿದ್ದೀರಿ ಎಂಬ ಸಂಗತಿಯೇ ಇಲ್ಲಿ ಏನೋ ತಪ್ಪಾಗಿದೆ ಎಂಬುದನ್ನು ತೋ–ರಿಸುತ್ತದೆ” ಎಂದರು. ಭಾರತವು ಪ್ರಜಾಪ್ರಭುತ್ವ ಮತ್ತು ಶಾಂತಿಪ್ರಿಯ ದೇಶವಾಗಿದ್ದು, ಇಲ್ಲಿ ಜನರಿಗೆ ಪ್ರಶ್ನೆಗಳನ್ನು ಕೇಳುವ ಹಾಗೂ ಪ್ರತಿಭಟಿಸುವ ಹಕ್ಕಿದೆ ಎಂದು ಅವರು ಹೇಳಿದರು. “ಈ ದೇಶದ ಜನರು, ರೈತರು, ಕಾರ್ಮಿಕ ಸಂಘಟನೆಗಳು ಮತ್ತು ಎಲ್ಲ ವಿದ್ಯಾರ್ಥಿ ಸಂಘಟನೆಗಳು ಬೀದಿಗಿಳಿದು ಶಾಂತಿಯುತವಾಗಿ ಪ್ರತಿಭಟಿಸುತ್ತವೆ. ನೀವು ನಮ್ಮನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವವರೆಗೂ ಈ ಹೋರಾಟ ಮುಂದುವರಿಯುತ್ತದೆ” ಎಂದು ಅವರು ತಿಳಿಸಿದರು.

ಕೇರಳದಲ್ಲಿ ಪೊಲೀಸರು ಮಧ್ಯಪ್ರವೇಶಿಸಿದ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪ್ರಕಾಶ್ ರಾಜ್, ಶಾಂತಿಯುತ ಪ್ರತಿಭಟನೆ ನಡೆಸಲು ಅನುಮತಿಯ ಅಗತ್ಯವಿದೆಯೇ ಎಂದು ಪ್ರಶ್ನಿಸಿದರು. “ಈ ದೇಶದಲ್ಲಿ ಪ್ರತಿಭಟಿಸಲು ನಮಗೆ ಯಾರ ಅನುಮತಿ ಬೇಕು?” ಎಂದು ಅವರು ಕೇಳಿದರು.

# ಭಾರತದಲ್ಲಿ ಅತಿವೇಗದ ಇಂಟರ್ನೆಟ್ ಸೇವೆ ಒದಗಿಸಲು ಸಿದ್ಧ : ಸ್ಟಾರ್‌ಲಿಂಕ್ ಘೋಷಣೆ

ನವದೆಹಲಿ: ಭಾರತದಲ್ಲಿ ಅತಿವೇಗದ ಇಂಟರ್ನೆಟ್ ಸೇವೆಗಳನ್ನು ಒದಗಿಸಲು ಸಿದ್ಧವಾಗಿರುವುದಾಗಿ ಎಲೋನ್ ಮಸ್ಕ್ ನೇತೃತ್ವದ ಸ್ಟಾರ್‌ಲಿಂಕ್ ಘೋಷಿಸಿದೆ. ಕಳೆದ ಐದು ವರ್ಷಗಳಿಗೂ ಹೆಚ್ಚು ಕಾಲ ಭಾರತೀಯ ನಿಯಂತ್ರಕರು, ಉದ್ಯಮ ವಲಯ ಮತ್ತು ಟೆಲಿಕಾಂ ಆಪರೇಟ–ರ್‌ಗಳೊಂದಿಗೆ ಕೆಲಸ ಮಾಡಿದ್ದು, ಸರ್ಕಾರದ ಅಗತ್ಯ ಅನುಮೋದನೆಗಳೊಂದಿಗೆ ದೇಶದಲ್ಲಿ ಪ್ರತ್ಯೇಕ ಮೂಲಸೌಕರ್ಯವನ್ನು ನಿರ್ಮಿಸಿರುವುದಾಗಿ ಸ್ಟಾರ್‌ಲಿಂಕ್ ಎಕ್ಸ್ (ಫ) ನಲ್ಲಿ ತಿಳಿಸಿದೆ.

ಸ್ಟಾರ್‌ಲಿಂಕ್ ತನ್ನ ಪೋಸ್ಟ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ನೀಡಿದ ಹೇಳಿಕೆಯನ್ನೂ ಟ್ಯಾಗ್ ಮಾಡಿದೆ. ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಸಂಸ್ಥೆಯು ಉಪಗ್ರಹ ಸಂವಹನ ಕ್ಷೇತ್ರದಲ್ಲಿ ಸ್ಟಾರ್‌ಲಿಂಕ್ ಸೇರಿದಂತೆ ಇತರ ಸಂಸ್ಥೆಗಳಿಂದ ಎದುರಾಗುವ ಪೈಪೋಟಿಯನ್ನು ಸ್ವಾಗತಿಸುವುದಾಗಿ ಹೇಳಿದೆ. ಆದರೆ, ಮಾರುಕಟ್ಟೆಯಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಂಸ್ಥೆಗಳೂ ಭಾರತೀಯ ಕಾನೂನುಗಳನ್ನು ಪಾಲಿಸುವುದು ಕಡ್ಡಾಯ ಎಂದು ಒತ್ತಿಹೇಳಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಸ್ಟಾರ್‌ಲಿಂಕ್, ಭಾರತೀಯ ಬಳಕೆದಾರ–ರಿಗೆ ಸುರಕ್ಷಿತವಾಗಿ ಮತ್ತು ಭದ್ರವಾಗಿ ಸೇವೆ ಒದಗಿಸುವ ಉದ್ದೇಶದಿಂದ ದೇಶದೊಳಗೇ ಪ್ರತ್ಯೇಕ ವ್ಯವಸ್ಥೆಗಳು, ಗೇಟ್‌ವೇಗಳು ಮತ್ತು ಇತರ ಮೂಲಸೌಕರ್ಯಗಳನ್ನು ನಿರ್ಮಿಸಲಾಗಿದೆ. ಇವೆಲ್ಲವನ್ನೂ ಸರ್ಕಾರದ ಅಗತ್ಯ ಅನುಮೋದನೆಗಳೊಂದಿಗೆ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಭಾರತವನ್ನು ಅತಿವೇಗದ ಇಂಟ–ರ್ನೆಟ್ ಸಂಪರ್ಕದೊಂದಿಗೆ ಜೋಡಿಸಲು ತಾವು ಸಿದ್ಧವಾಗಿರುವುದಾಗಿಯೂ ಸ್ಟಾರ್‌ಲಿಂಕ್ ಪುನರುಚ್ಚರಿಸಿದೆ. ಭಾರತದ ಉಪಗ್ರಹ ಸಂವಹನ ಮಾರುಕಟ್ಟೆಯಲ್ಲಿ ಪೈಪೋಟಿ ಕುರಿತು ಸಾರ್ವಜನಿಕವಾಗಿ




ವಾಗ್ವಾದ ನಡೆಯುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಎಲೋನ್ ಮಸ್ಕ್ ಅವರು ಭಾರತದ ಉಪಗ್ರಹ ಸಂವಹನ ವಲಯದ ಬಗ್ಗೆ ಟೀಕೆ ವ್ಯಕ್ತಪಡಿಸಿ, ಇಲ್ಲಿನ ಸ್ಪರ್ಧಾತ್ಮಕ ವಾತಾವರಣದ ಕುರಿತು ಪ್ರಶ್ನೆಗಳನ್ನು ಎತ್ತಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ರಿಲಯನ್ಸ್, ಯಾವ ಸಂಸ್ಥೆಯು ಗ್ರಾಹಕರಿಗೆ ಅತ್ಯುತ್ತಮ ಸೇವೆ ಒದಗಿಸುತ್ತದೆ ಎಂಬುದನ್ನು ನಿರ್ಧ–ರಿಸಲು ಸ್ಪರ್ಧಾತ್ಮಕ ಮಾರುಕಟ್ಟೆಯೇ ಸೂಕ್ತ ವೇದಿಕೆ ಎಂದು ಹೇಳಿತ್ತು. ಅಲ್ಲದೆ, ಭಾರತದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಂದು ಕಂಪನಿಯೂ ದೇಶದ ಕಾನೂನುಗಳನ್ನು ಪಾಲಿಸಲೇಬೇಕು ಎಂದು ಸ್ಪಷ್ಟಪಡಿಸಿತ್ತು.

# ಶೇ.100ರಷ್ಟು ಸುಂಕ ವಿಧಿಸುವ ನಿರ್ಧಾರದಿಂದ ಹಿಂದೆ ಸರಿದ ಟ್ರಂಪ್ : ಭಾರತ ನಿರಾಳ

ನವದೆಹಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಭಾರತದಂತಹ ದೇಶಗಳ ಮೇಲೆ ಶೇ. 100ರವರೆಗೆ ಸುಂಕ ವಿಧಿಸುವ ಕ್ರಮದಿಂದ ಅಮೆರಿಕ ಹಿಂದೆ ಸರಿದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸ ಆದೇಶ ಹೊರಡಿಸಿದ್ದು, ರಷ್ಯಾ ಸಂಬಂಧಿತ ಕೆಲವು ನಿರ್ಬಂಧಗಳು ಮತ್ತು ಸುಂಕಗಳು ಜಾರಿಗೆ ಬರುವ ಮುನ್ನವೇ ವಿನಾಯಿತಿ ನೀಡುವ ನಿರ್ಧಾರ ಕೈಗೊಂಡಿದ್ದಾರೆ. ಇದರಿಂದ ಭಾರತ ಮತ್ತು ಚೀನಾ ಸೇರಿದಂತೆ ರಷ್ಯಾದಿಂದ ತೈಲ ಖರೀದಿಸುವ ಹಲವು ದೇಶಗಳಿಗೆ ತಾತ್ಕಾಲಿಕ ನಿರಾಳತೆ ಸಿಕ್ಕಂತಾಗಿದೆ.

ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಪ್ರಮುಖ ದೇಶಗಳಲ್ಲಿ ಒಂದಾಗಿರುವುದರಿಂದ, ಅಮೆರಿಕದ ಈ ನಿರ್ಧಾರ ವ್ಯಾಪಾರ ವಲಯದ ದೃಷ್ಟಿಯಿಂದ ಮಹತ್ವ ಪಡೆದಿದೆ. ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲೆ ಭಾರಿ ಸುಂಕ ವಿಧಿಸಿದರೆ, ಅಲ್ಲಿನ ಮಾರುಕಟ್ಟೆಯಲ್ಲಿ ಭಾರತೀಯ ಉತ್ಪನ್ನಗಳ ಸ್ಪರ್ಧಾತ್ಮಕತೆ ಮತ್ತು ವ್ಯಾಪಾರದ ಮೇಲೆ ಪರಿಣಾಮ ಬೀರಬಹುದೆಂಬ ಆತಂಕವಿತ್ತು. ಟ್ರಂಪ್ ಕಳೆದ ಸೆಪ್ಟೆಂಬರ್‌ನಲ್ಲಿ ರಷ್ಯಾ ಮತ್ತು ಇರಾನ್ ವಿರುದ್ಧದ ನಿರ್ಬಂಧಗಳಿಗೆ ಸಂಬಂಧಿಸಿದ ಕಾನೂನಿಗೆ ಸಹಿ



ಹಾಕಿದ್ದರು. ಅದರ ಅನ್ವಯ, ರಷ್ಯಾದಿಂದ ಕಚ್ಚಾ ತೈಲ ಅಥವಾ ನೈಸರ್ಗಿಕ ಅನಿಲ ಖರೀದಿಸುವ ಪ್ರಮುಖ ಐದು ದೇಶಗಳಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ 30 ದಿನಗಳೊಳಗೆ ಶೇ. 100ರವರೆಗೆ ಸುಂಕ ವಿಧಿಸಲು ಅವಕಾಶವಿತ್ತು. ಕಾನೂನು ಜಾರಿಯಾದ 30 ದಿನಗಳ ಬಳಿಕವೂ ಉದ್ದೇಶಪೂರ್ವಕವಾಗಿ ರಷ್ಯಾದಿಂದ ತೈಲ ಅಥ–ವಾ ಅನಿಲ ಖರೀದಿಸುವ ದೇಶಗಳ ವಿರುದ್ಧ ಈ ಕ್ರಮ ಅನ್ವಯಿಸಬಹುದಿತ್ತು. ರಷ್ಯಾದ ಮೇಲಿನ ನಿರ್ಬಂಧಗಳನ್ನು ತಪ್ಪಿಸಿಕೊಳ್ಳಲು ನೆರವಾಗುವ ಪ್ರಮುಖ ದೇಶಗಳ ವಿರುದ್ಧವೂ ಕ್ರಮ ಕೈಗೊಳ್ಳಲು ಕಾನೂನು ಅವಕಾಶ ಕಲ್ಪಿಸಿತ್ತು. ಈ ಹಿನ್ನೆಲೆಯಲ್ಲಿ ಭಾರತ ಸೇರಿದಂತೆ ಹಲವು ದೇಶಗಳು ಆತಂಕ ವ್ಯಕ್ತಪಡಿಸಿದ್ದವು. ಅಮೆರಿಕದ ಮಾರುಕಟ್ಟೆಯು ಭಾರತೀಯ ರಫ್ತಿಗೆ ಪ್ರಮುಖವಾಗಿರುವುದರಿಂದ, ಹೆಚ್ಚಿನ ಸುಂಕ ಜಾರಿಯಾದರೆ ಉಭಯ ದೇಶಗಳ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿತ್ತು. ಶ್ವೇತಭವನ ಹೊರಡಿಸಿದ ಆದ–ೇಶದಲ್ಲಿ, ಪ್ರಸ್ತುತ ಸಂದರ್ಭದಲ್ಲಿ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ದೇಶಗಳಿಗೆ ವಿನಾಯಿತಿ ನೀಡುವುದು ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿದೆ ಎಂದು ಟ್ರಂಪ್ ಹೇಳಿದ್ದಾರೆ. ಈ ಕುರಿತು ಅಮೆರಿಕದ ಸಂಸತ್ತಿಗೂ ಪ್ರಮಾಣಪತ್ರ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ.

ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುವ ದೇಶಗಳಲ್ಲಿ ಚೀನಾ ಮತ್ತು ಭಾರತ ಪ್ರಮುಖವಾಗಿವೆ. ಅಜರ್‌ಬೈಜಾನ್, ಹಂಗೇರಿ ಮತ್ತು ಸ್ಲೊವಾಕಿಯಾ ಕೂಡ ಈ ಪಟ್ಟಿಯಲ್ಲಿವೆ. ಟ್ರಂಪ್ ಅವರ ನಿರ್ಧಾರದಿಂದ ರಷ್ಯಾದ ತೈಲ ಖರೀದಿಗೆ ಸಂಬಂಧಿಸಿದಂತೆ ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಸುಂಕದ ಮೂಲಕ ಒತ್ತಡ ಹೇರುವ ಪ್ರಸ್ತಾವಿತ ಕ್ರಮಗಳಿಗೆ ಸದ್ಯಕ್ಕೆ ವಿನಾಯಿತಿ ದೊರೆತಿದೆ. ಆದರೆ, ಯಾವ ನಿರ್ಬಂಧಗಳು ಮತ್ತು ಸುಂಕಗಳಿಗೆ ನಿಖರವಾಗಿ ವಿನಾಯಿತಿ ನೀಡಲಾಗಿದೆ ಎಂಬ ವಿವರ ಆದೇಶದಲ್ಲಿ ಸ್ಪಷ್ಟವಾಗಿಲ್ಲ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com